ಸವತಿಯ ಸೋಲು

(ಮಕ್ಕಳ ನಾಟಕ)

★

ಶ್ರೀಮತಿ ಲೀಲಾ ಬ್ಯಾ ಕಾಮತ್

14. 2. 1956.

ಮುದ್ರಕರು ಮತ್ತು ಪ್ರಕಾಶಕರು:

ಪ್ರಭಾಕರ ಪ್ರೆಸ್ ಲಿಮಿಟೆಡ್, ಉಡುಪಿ.

ನನ್ನ ಮಾತು

ಶಾಲಾಕಾಲೇಜುಗಳ ವರ್ಧಂತ್ಯುತ್ಸವ ಹಾಗೂ ಇತರ ಸಮಾರಂಭಗಳಲ್ಲಿ ಕಿರಿಯರು ಅಭಿನಯಿಸಿದ ಹಲವು ನಾಟಕಗಳನ್ನು ಕಂಡಬಳಿಕ ಮಕ್ಕಳಿಗಾಗಿ ನಾನೂ ಕೆಲವು ನಾಟಕಗಳನ್ನು ಬರೆಯಬೇಕೆಂಬ ಒಂದು ಹಂಬಲ ನನ್ನಲ್ಲಿ ಮೂಡಿತು. ನನ್ನ ಮನಸ್ಸಿನ ಹೆಬ್ಬಯಕೆಯ ಮೊದಲ ಕುಸುಮವೇ ಈ ನಾಟಕ. ಕಥಾವಸ್ತುವು ಪೌರಾಣಿಕವಾದರೂ ಆಧುನಿಕ ಹೆಸರನ್ನೇ ಇರಿಸಿದೆ. ಚಿಕ್ಕಮಕ್ಕಳಿಗೆ ಅಭಿನಯಿಸಲು ಯುಕ್ತವಾಗುವಂತೆ ಕಥಾವಸ್ತುವನ್ನು ಸುಲಭ ಮತ್ತು ಸರಳ ರೀತಿಯಲ್ಲಿ ಬರೆದಿರುತ್ತೇನೆ. ದೈವಿಕ ಭಕ್ತಿ, ದೃಢತೆ, ತ್ಯಾಗ, ಸಹನೆ ಈ ಗುಣಗಳು ಮಕ್ಕಳು ತಾಯಂದಿರಿಂದ ಪಡೆಯುವ ಅಮೂಲ್ಯ ಸಂಪತ್ತು. ಈ ಸಂಪತ್ತನ್ನು ಪಡೆದ ಮಕ್ಕಳೇ ಜಗತ್ತಿನಲ್ಲಿ ಶ್ರೇಷ್ಠ ಮತ್ತು ಆದರ್ಶಪುತ್ರರೆಂದೆನಿಸಿಕೊಳ್ಳುವರು. ಈ ಆದರ್ಶವೇ ಈ ನಾಟಕದ ತಿರುಳು.

"ರಾಯಭಾರಿ" ವಾರಪತ್ರಿಕೆಯಲ್ಲಿ ಕ್ರಮಶಃ ಪ್ರಕಟವಾಗಿದ್ದ ಈ ನಾಟಕವನ್ನು ಪುಸ್ತಕರೂಪದಲ್ಲಿ ಪ್ರಕಟಿಸಿ ಕನ್ನಡನಾಡಿನ ಕಿರಿಯರ ಕೈಯಲ್ಲಿಡುತ್ತೇನೆ. ಕಿರಿಯರು ಇದನ್ನು ಎತ್ತಿಕೊಂಡು ಓದಿ ಅಭಿನಯಿಸಿದಲ್ಲಿ ಅದುವೇ ನನ್ನ ಶ್ರಮಕ್ಕೆ ತಕ್ಕ ಪ್ರತಿಫಲ.

ಈ ನಾಟಕವನ್ನು ತಮ್ಮ ವಾರಪತ್ರಿಕೆಯಲ್ಲಿ ಪ್ರಕಟಿಸಿದುದಕ್ಕಾಗಿ ರಾಯಭಾರಿ ಸಂಪಾದಕವರ್ಗದವರಿಗೂ ಈ ಪುಸ್ತಕವನ್ನು ಅಂದವಾಗಿ ಶೀಘ್ರದಲ್ಲಿಯೆ ಮುದ್ರಿಸಿ, ಪ್ರಕಾಶನದ ಹೊಣೆಯನ್ನು ಹೊತ್ತ ಪ್ರಭಾಕರ ಪ್ರೆಸ್ಸಿನವರಿಗೂ ನನ್ನ ಕೃತಜ್ಞತೆಗಳು.

ಉಡುಪಿ,
1—1—1956.

ಲೀಲಾ ಬಾೖ ಕಾಮತ್

ಸವತಿಯ ಸೋಲು

(ಏಕಾಂಕ ನಾಟಕ)

★

ಮೊದಲನೆ ದೃಶ್ಯ.

ಸ್ಥಳ – ಅರಮನೆಯ ಮಹದ್ವಾರ. ಸೇವಕ—ಪಹರೆ ಕಾಯುತ್ತಿರುವನು.

ಪಹರೆಯವ— ಶಾಲೆಯ ಮಕ್ಕಳು ಮನೆಗೆ ಹಿಂತಿರುಗುತ್ತಲಿರುವರು. ನನ್ನ ಪಹರೆಯ ಸರದಿ ಮುಗಿಯುತ್ತ ಬಂತು (ದೂರದಲ್ಲಿ ನೋಡಿ) ನನ್ನನ್ನು ಬಿಡುಗಡೆ ಗೊಳಿಸುವವನು ಇನ್ನೂ ಬರಲಿಲ್ಲವೇಕೆ? ಯಾವಾಗ ನೋಡಿದರೂ ಅವನ ಅವಸ್ಥೆ ಹೀಗೇನೇ! ಅರಮನೆ ಕೆಲಸವೆಂದಮೇಲೆ ಹೊತ್ತಿಗೆ ಸರಿಯಾಗಿ ಹಾಜರಾಗಬೇಡವೇ? ಬರಲಿ ಅವ ಇಂದು. ಚೆನ್ನಾಗಿ ಎರಡು ಮಾತು ಹೇಳಿಯೇ ಬಿಡುತ್ತೇನೆ. (ಅತ್ತ ಇತ್ತ ಅಡ್ಡಾಡುವನು. ದೂರದ ಹಾದಿ ನೋಡುವನು) ಯಾರೋ ಇತ್ತ ಕಡೆ ಬರುವಂತಿದೆ (ಸ್ವಲ್ಪ ತಡೆದು) ಆದರೆ ಪಹರೆಯವನಲ್ಲ. ಯಾರಾಗಿರಬಹುದು? ಹರೆ ರಾಮ್! ಸುನೀತಿ ಮಹಾರಾಣಿಯವರ ಪುತ್ರ ಧ್ರುವ ಮಹಾರಾಜರು ಇತ್ತಕಡೆ ಬರುವಂತಿದೆ. ನಾರಾಯಣ! ಆಕಳ ಕರು ಈ ಸಿಂಹಿಣಿಯ ಗುಹೆಯೊಳಗೆ ಏಕೆ ಬಂತಪ್ಪಾ? (ಕೈಮುಗಿದು) ಪರಮಾತ್ಮಾ ಸಿಂಹಿಣಿಯ ದೃಷ್ಟಿಗೆ ಬೀಳದಂತೆ ಈ ಕರುವನ್ನು ಆ ಮನೆಯಿಂದ ಸುರಕ್ಷಿತವಾಗಿ ಹೊರಗೆ ಹೋಗುವಂತೆ ಕರುಣಿಸು. (ಸಾದಾ ಉಡುಪಿನಲ್ಲಿ-ಆಶ್ರಮದ ಬಾಲಕರಂತೆ ಪಂಚೆಯನ್ನುಟ್ಟು ತಲೆಯ ಮೇಲೆ ಕೂದಲು ಬಿಟ್ಟು ಧ್ರುವಕುಮಾರನ ಪ್ರವೇಶ)

ಧ್ರುವ— ಹೌದಯ್ಯಾ! ನನ್ನ ಅಪ್ಪಯ್ಯನೆಲ್ಲಿರುವರು? ಅವರನ್ನು ಸ್ವಲ್ಪ ಕಾಣಬೇಕಾಗಿತ್ತು!

ಪಹರೆಯುವ – (ಸ್ವಗತ) ಅಕಟಕಟಾ ಇದಕ್ಕೇನು ಉತ್ತರಕೊಡಲಿ? (ಪ್ರಕಟವಾಗಿ) ದೇವರೇ ನನ್ನನ್ನು 'ನೀವು' ಎಂದು ಕರೆಯಬೇಡಿ. ನೀನು ಅಂದು ಕರೆಯಿರಿ.

ಧ್ರುವ— ಹೌದಯ್ಯ ಇದು ನಾನು ಕೇಳಿದ ಪ್ರಶ್ನೆಗೆ ಉತ್ತರವಲ್ಲವಲ್ಲ. (ಆತುರದಿಂದ) ನನ್ನ ಅಪ್ಪಯ್ಯನೆಲ್ಲಿದ್ದಾರೆ? ಅವರನ್ನು ಕಾಣುವ ಆತುರ ದಿಂದ ನಾನಿಲ್ಲಿ ಬಂದುದಾಗಿದೆ. ಬೇಗ ತೋರಿಸಿರಿ.

ಪಹರೆಯುವ— (ಸ್ವಗತ) ಈ ಪ್ರಶ್ನೆಯಿಂದ ಹೇಗೆ ತಪ್ಪಿಸಿಕೊಳ್ಳಲಿ? (ಪ್ರಕಟವಾಗಿ) ನೀವಾರು? ಎಲ್ಲಿಯವರು? ನಿಮ್ಮ ಅಪ್ಪಯ್ಯನಾರು? ನನಗೆ ಇದು ಯಾವದೂ ಬಗೆ ಹರಿಯಲಿಲ್ಲವಲ್ಲ! (ಸ್ವಲ್ಪ ಗಡಿಬಿಡಿಯಿಂದ) ಸರಿ, ಇಲ್ಲಿ ರಾಜದ್ವಾರದಲ್ಲಿ ನಿಂತು ಮಾತನಾಡುವದಕ್ಕಿಂತ ರಾಜಮಾರ್ಗದಲ್ಲಿ ಹೋಗಿಯೇ ಮಾತನಾಡುವ. ಬನ್ನಿ (ಮುಂದರಿಯುತ್ತಾನೆ. ಧ್ರುವಕುಮಾರ ನಿಂತಲ್ಲೇ ದೃಢನಾಗಿ ನಿಂತು)

ಧ್ರುವ— (ಹೊಟ್ಟೆ ತುಂಬ ನಗುತ್ತ) ಅಹಹ! ಎಂತಹ ಉಪಾಯದ ಮಾತಿದು? ನನ್ನ ಅಪ್ಪಯ್ಯನ ಮನೆ ಬಾಗಿಲಲ್ಲಿ ಕುಳಿತು ನನ್ನ ಅಪ್ಪಯ್ಯ ನೆಂದರೆ ಯಾರೆಂದು ತಿಳಿಯದಂತೆ! ಇದು ನಂಬುವ ಮಾತೇ? ಯಾರಾ ದರೂ ನಂಬುವರೆ?

ಪಹರೆಯುವ— ನನ್ನ ಚಿನ್ನಾ ನನ್ನ ಮಾತು ಸುಟ್ಟು ಹೋಗಲಿ. ನೀವು ಹಾದಿ ತಪ್ಪಿರಲಿಕ್ಕೆ ಸಾಕು. ನಾವು ರಾಜಮಾರ್ಗದಲ್ಲಿ ಹೋಗಿ ದಾರಿಹೋಕ ರೊಡನೆ ಯಾರನ್ನಾದರೂ ವಿಚಾರಿಸಿ ನೋಡುವಾ ಬನ್ನಿ. ಅಲ್ಲೇ ನಿಂತಿರುವಿ ರೇಕೆ? (ಮುಂದುವರಿಯುವನು.)

ಧ್ರುವ— (ಅವನನ್ನು ತಡೆದು) ಛೆ! ಛೆ! ನಾನು ತಪ್ಪಿಲ್ಲ. ಇದೇ ಮನೆ. ನಿಮಗೆ ತಿಳಿಯದಾದರೆ ಇನ್ನಷ್ಟು ವಿವರವಾಗಿಯೇ ಹೇಳಿಬಿಡುತ್ತೇನೆ. ಈ ಊರಿನ ಅರಸರಿಲ್ಲವೇ? ಅಂದರೆ ಈ ದೊಡ್ಡ ಮನೆಯ ಯಜಮಾನರಾದ ರಾಯರಿಲ್ಲವೇ? ಅವರ ಮಗ ನಾನು— ನನ್ನ ಹೆಸರು ಧ್ರುವ— ನನ್ನ ತಾಯಿಯ ಹೆಸರು ಸುನೀತಿ. ಮತ್ತೆ ನನ್ನ ತಂದೆಯ ಹೆಸರು (ಆಲೋಚಿ

ಸುತ್ತಾ ತಡೆದು) ಉತ್ತಾನಪಾದರಾಜರು. ಅವರೇ— ಅವರೇ ನನ್ನ ತಂದೆ ಯುವರು. ಈಗಲಾದರೂ ತಿಳಿಯಿತೇ? (ಮುಂದುವರಿಯುತ್ತಾ) ಸರಿ ಹಾದಿ ಗಡ್ಡವಾಗಿ ನಿಲ್ಲಬೇಡಿ. ನನಗೆ ಅವರನ್ನು ಭೇಟಿಯಾಗಬೇಕಾಗಿದೆ.

ಪಹರೆಯುವ— (ತಲೆ ತುರಿಸಿಕೊಳ್ಳುತ್ತಾ) ಅದೇನೋ ಸರಿ! ಅವರಿಗೆ ಏನಾದರೂ ತಿಳಿಸಬೇಕೆ? ನನ್ನೊಡನೆ ಹೇಳಿಬಿಡಿ. ನಾನೇ ಹೋಗಿ ತಿಳಿಸುತ್ತೇನೆ. ಆಯಿತಲ್ಲವೇ ನೀವು ಬಂದ ಕೆಲಸ? ಆದರೆ ನನ್ನ ಮನಸ್ಸಿನ ಸಂಶಯ ಹೋಗುವುದಿಲ್ಲ! ನೀವು ಮನೆ ತಪ್ಪಿರಲಿಕ್ಕೂ ಸಾಕು.

ಧ್ರುವ— (ಗಟ್ಟಿಯಾಗಿ) ನಾನು ಮನೆ ತಪ್ಪಿಲ್ಲ. ನೋಡಿ ಎಲ್ಲಾ ಮನೆಗಳಿಗಿಂತ ಈ ಮನೆ ದೊಡ್ಡದೇ ಇದೆ. ಇದೇ ನಮ್ಮಪ್ಪಯ್ಯನ ಮನೆ. ನಾನು ನಿನ್ನೆಯೇ ನಮ್ಮಮ್ಮನಿಂದ ಎಲ್ಲವನ್ನು ಗೊತ್ತುಪಡಿಸಿಕೊಂಡಿದ್ದೇನೆ. (ಸ್ವಗತ) ಇವನಿಗೆ ನಾನು ಮಾತನಾಡಿದ್ದು ಸರಿ ಅರ್ಥವಾಗಲಿಲ್ಲವೆಂದು ಕಾಣುತ್ತದೆ. ಕಿವಿ ಸ್ವಲ್ಪ ಕಿವುಡಾಗಿರಲೂ ಬಹುದು. (ಅವನ ಬಳಿ ಹೋಗಿ ಗಟ್ಟಿಯಾಗಿ) ಹೌದಯ್ಯಾ ಇದೇ ಮನೆ. ನಾನು ಮನೆ ತಪ್ಪಿಲ್ಲ. (ಒಳಗೆ ಇಣಿಕಿ) ನೋಡಿ ಅಲ್ಲಿ ಓರ್ವ ಹುಡುಗ ಆಡುತ್ತಾನಲ್ಲ— ಅವನಾರೆಂದಾದರೂ ಹೇಳ ಬಲ್ಲಿರಾ?

ಪಹರೆಯುವ—(ಬೇರೆ ದಿಕ್ಕಿಗೆ ಇಣಿಕಿ) ಎಲ್ಲಿ? ಎಲ್ಲಿ? ನನಗೆ ಕಾಣುವುದಿಲ್ಲವಲ್ಲ. ಅಲ್ಲಿಯೇ? ಅವನೇ? ಅವನು ಇಲ್ಲಿ ಪಹರೆಕಾಯುವವ ನನ್ನ ಸರದಿ ಮುಗಿದುದರಿಂದ ನನ್ನನ್ನು ಬಿಡುಗಡೆಗೊಳಿಸಲು ಬರುತ್ತಲಿದ್ದಾನೆ.

ಧ್ರುವ— (ತಲೆ ಬಡಕೊಂಡು) ಕಿವುಡೆಂದು ಎಣಿಸಿದೆ. ಕಣ್ಣೂ ಸರಿ ಕಾಣುವುದಿಲ್ಲ ಕಾಣ್ತದೆ. (ಅವನನ್ನು ಕೈಹಿಡಿದು ತಿರುಗಿಸಿ) ಅತ್ತ ಕಡೆ ಅಲ್ಲ. ಇತ್ತ ಕಡೆ. ಓ ಅಲ್ಲಿ ಸರಿ ನೋಡಿ.

ಪಹರೆಯುವ— (ನಿರುಪಾಯನಾಗಿ) ಅವರೆ ಅವ—ರು—ಅವರು.

ಧ್ರುವ— ಅವರೇ ಅವರು ಸುಂದರವಾದ ಉಡುಪನ್ನು ಧರಿಸಿ ಮೈ ತುಂಬ ಆಭರಣಗಳನ್ನು ಧರಿಸಿ... (ಇಣಿಕಿ ನೋಡಿ) ಮತ್ತೆ ಆ ಹೆಂಗಸು ಬಂದರಲ್ಲ— ಅವರಾರು?

ಪಹರೆಯುವ— ನಾರಾಯಣ—ನಾರಾಯಣ--(ನಿಂತಲ್ಲೇ ಕುಳಿತು ಕೊಳ್ಳುವನು.) (ಮೆಲ್ಲಮೆಲ್ಲನೆ) ಅವರೇ ಮಹಾರಾಜರ ಧರ್ಮಪತ್ನಿ ಮತ್ತು ಮ—ತ್ತು ಅವರು ಮಹಾರಾಜರ ಮಗ.

ಧ್ರುವ— ಭಲೇ ನನಗೋರ್ವ ತಮ್ಮ ಮತ್ತು ಚಿಕ್ಕಮ್ಮನಿರುವಳೆಂದು ಅಮ್ಮ ಹೇಳಲಿಲ್ಲವಲ್ಲ! (ಆಲೋಚಿಸುತ್ತಾ) ಎಲ್ಲಿಯೋ ಮರೆತಿರಬೇಕು. ಅಥವಾ ನಾನು ಕೇಳಿಲ್ಲವೆಂದು ಹೇಳಿರಲಿಕ್ಕಿಲ್ಲ. ಅಣ್ಣತಮ್ಮಂದಿರು ಇಲ್ಲದ ಓರ್ವನೇ ಇದ್ದು ಬೇಸತ್ತ ನನಗೆ ತಮ್ಮನೊಬ್ಬ ಸಿಕ್ಕಿದಂತಾಯಿತು.

ಪಹರೆಯುವ — ನಡಿರಿ ಮಹಾರಾಜರೇ— ನಿಮ್ಮನ್ನು ಮನೆತನಕ ಬಿಟ್ಟುಬರುತ್ತೇನೆ. (ಕೈ ಹಿಡಿಯುತ್ತಾನೆ)

ಧ್ರುವ— ನೋಡಿ ಅತ್ತ ಕಡೆ ನೋಡಿ ಇನ್ನಾರೋ ಬಂದರಲ್ಲ— ತಲೆ ಯಲ್ಲಿ ಕಿರೀಟವಿದೆ ನಗುಮೊಗದಿಂದ ಮಗುವಿನಬಳಿ ಬಂದರಲ್ಲಾ! ಆ ಹುಡುಗನನ್ನು ಎತ್ತಿ ಕೊಂಡರಲ್ಲಾ. (ಆಲೋಚಿಸುತ್ತಾ) ಅವರೇ ಆ ಹುಡು ಗನ ತಂದೆಯಾರಗಿಬೇಕು. ಅವರು ಆ ಹುಡುಗನ ತಂದೆಯಾದರೆ (ಚಪ್ಪಾಳೆ ತಟ್ಟುತ್ತಾ) ನನ್ನ ಅಪ್ಪಯ್ಯನು ಅವರೇ ಎಂಬುದರಲ್ಲಿ ಸಂಶಯವಿಲ್ಲ. (ಪಹರೆಯುವನ ಕೈಯಿಂದ ಕೈ ಬಿಡಿಸಿಕೊಳ್ಳುವನು.)

ಪಹರೆಯುವ— ನನ್ನ ಚಿನ್ನಾ! ಸುನೀತಿ ದೇವಿಯವರ ಕಣ್ಮಣಿಯೇ ಅತ್ತ ಕಡೆ ಹೋಗಬೇಡಿ ದೇವರೇ! ಇಲ್ಲೇ ನಿಂತು ನಿಮ್ಮ ಅಪ್ಪಯ್ಯನನ್ನು ಕಣ್ತುಂಬ ನೋಡಿದರೆ ಸಾಲದೇ? ಬನ್ನಿ ಇತ್ತ ಬನ್ನಿ! ನಾನೇ ನಿಮಗೆ ಎತ್ತಿ ಕೊಂಡು ತೋರಿಸುತ್ತೇನೆ. (ಎತ್ತಿಕೊಂಡು ತೋರಿಸುವನು) ಸರಿ ನೋಡಿದಿರಾ? ಇನ್ನು ಮನೆಗೆ ಹೋಗೋಣವೇ?

ಧ್ರುವ— ಹೌದಯ್ಯಾ! ನಿಮ್ಮಿಂದಾಗಿ—ನೀವು ಎತ್ತಿಕೊಂಡುದರಿಂದ ಅಪ್ಪಯ್ಯನನ್ನು ಕಣ್ತುಂಬ ನೋಡಿದೆ. ತುಂಬ ಉಪಕಾರವೇ ಸರಿ. ಆದರೆ— ಆ—ದರೆ.

ಪಹರೆಯುವ - ಆದರೆ ಏನು ದೇವ್ರೆ? ಹೇಳಿಬಿಡಿ

ಧ್ರುವ— ಆದರೆ ಅಪ್ಪಯ್ಯ ನನ್ನ ತಮ್ಮನನ್ನು ಎತ್ತಿಕೊಂಡಂತೆ ನನ್ನನ್ನೂ ಒಂದು ಬಾರಿ ಎತ್ತಿಕೊಳ್ಳಬೇಕು ಎಂಬ ಆಶೆ ಪ್ರಾರಂಭವಾಗಿದೆ ಯಲ್ಲಾ. ಇಷ್ಟರವರೆಗೆ ಅಪ್ಪಯ್ಯನನ್ನು ನೋಡಬೇಕೆಂಬ ಆಸೆ ಹೇಗೂ ಪೂರ್ಣವಾಯ್ತು. ಇನ್ನು...

ಪಹರೆಯುವ— ಸರಿ ದೇವ್ರೆ ಇನ್ನು ಇನ್ನೊಮ್ಮೆ ನೋಡೋಣ ಇಂದಿಗೆ ಇಷ್ಟೇ. ಸಾಕು. (ಧ್ರುವನ ಕೈ ಹಿಡಿದು ಮುಂದುವರಿಯುವನು. ಧ್ರುವ ಆಲೋಚಿಸುತ್ತಾ ನಾಲ್ಕು ಹೆಜ್ಜೆ ಮುಂದುವರಿದು ಥಕ್ಕನೆ ಅವನಿಂದ ಕೈ ಬಿಡಿಸಿಕೊಳ್ಳುವನು.)

ಧ್ರುವ— ಹೌದಯ್ಯಾ! ಇಲ್ಲಿ ನೋಡಿ. ನನ್ನಿಂದ ಅಪ್ಪಯ್ಯನ ತೊಡೆ ಮೇಲೆ ಕುಳಿತುಕೊಳ್ಳಬೇಕೆಂಬ ಆಸೆ ತಡೆಯುಲಿಕ್ಕೆ ಆಗುವುದಿಲ್ಲವಲ್ಲ. ಎಷ್ಟೋ ಪ್ರಯತ್ನಿಸಿದೆ. ಆಗುವುದೇ ಇಲ್ಲ. ಅಪ್ಪಯ್ಯಾ! ಅಪ್ಪಯ್ಯಾ! ನನ್ನ ನ್ನೊಮ್ಮೆ ಎತ್ತಿಕೊಳ್ಳಿ ಅಪ್ಪಯ್ಯಾ! (ಕೂಗುತ್ತಾ ಒಳಗೆ ಓಡಿಹೋಗುವನು.)

ಪಹರೆಯುವ— ನಾಶವಾಯ್ತು. ಸರ್ವನಾಶವಾಯ್ತು. ನಾರಾಯಣಾ ಗೋವಿಂದ! ನೀನೇ ಕಾಪಾಡು. ನೀನೇ ಸಂರಕ್ಷಿಸು. ಅಯ್ಯೋ ನಾನಿಂದು ಬೆಳಗಾತ ಎದ್ದವನು ಯಾರ ಮುಖ ಕಂಡಿದ್ದೆನೊ? ಇಂದು ಬೆಳಗಾತ ಎದ್ದ ಕೂಡಲೇ ನಾನು ಸತ್ತುದಾದರೆ ಎಷ್ಟು ಒಳ್ಳೇಯದಿತ್ತು? ಈ ಅನರ್ಥವಾದರೂ ತಪ್ಪುತ್ತಿತ್ತು! (ತಲೆ ಒಡಕೊಂಡು ಆಲೋಚಿಸುತ್ತಾ) ನಾನು ಸತ್ತರೆ ಇನ್ನೊಬ್ಬ ಇಲ್ಲಿ ಕಾವಲಿರುತ್ತಿದ್ದ. ಧ್ರುವ ಮಹಾರಾಜರು ಬಂದೇ ಬರುತ್ತಿದ್ದರು. ಅನರ್ಥವಾಗುವುದು ತಪ್ಪುತ್ತಿರಲಿಲ್ಲ. ಸರಿ! ಮಿಂಚಿಹೋದ ಕಾರ್ಯಕ್ಕೆ ಚಿಂತಿಸಿ ಫಲವಿಲ್ಲ. ಈಗ ಹೇಗಾದರೂ ಮಾಡಿ ಗುಹೆಯಿಂದ ಆಕಳ ಮರಿಯನ್ನು ಹೊರಗೆ ತರಬೇಕು. (ಅತ್ತ ಇತ್ತ ಅಡ್ಡಾಡುವನು.) ಅಯ್ಯೊ! ವಿಧಿಯೇ ನಮ್ಮ ಮಹಾರಾಜರಿಗೆ ಏಕೆ ಈ ಬುದ್ಧಿ ಕೊಟ್ಟೇ? ಅವ ರಲ್ಲಿಯ ಸ್ತ್ರೀವ್ಯಾಮೋಹ ಏಕೆ ಇಷ್ಟು ಪರಮಾವಧಿಗೆ ಮುಟ್ಟಿಸಿದೆ? ಅಹಾ! ನಮ್ಮ ಪಟ್ಟದರಸಿಯಾದ ಸುನೀತಿ ದೇವಿಯವರಿಗೆ ಸಮಾನರಾದ ಮಹಾ ಸಾಧ್ವಿಯರು ಭೂಲೋಕದಲ್ಲಿ ಇರುವರೇ? ಗಂಡ ಪರಿತ್ಯಜಿಸಿದರೂ ಸಹನ ಶೀಲಳಾದ ಆ ಮಹಾತಾಯಿ ತನ್ನ ಮಗುವನ್ನು ನೋಡಿ ಜೀವಿಸಿಕೊಂಡಿ

ದ್ದಾರೆ. ಆಶ್ರಮ ಸದೃಶವಾದ ಮನೆಯಲ್ಲಿ ಯೋಗಿಗಳಂತೆ ಜೀವನ ನಡೆಸುತ್ತಾರೆ. ನೌಕರ ಚಾಕರರ ಅಂಗೈ ಮೇಲೆ ಬೆಳೆಯ ಬೇಕಾದ ಮಗು ಧ್ರುವ ಕುಮಾರ ಇಂದು ಸಾಮಾನ್ಯ ನಾಗರಿಕರ ಮಕ್ಕಳಂತೆ ನಡೆದುಕೊಂಡೇ ಪಾಠಶಾಲೆಗೆ ಹೋಗುತ್ತಾರೆ. ಆ ಮಗುವಿನ ರೂಪ, ಗುಣ, ನಡತೆ ಏನೆನ್ನಲಿ? ಹೊಟ್ಟೆಗೋಸ್ಕರ ಈ ಚಾಕರಿ ಮಾಡಬೇಕೇ ವಿನಃ ಮತ್ತೇನೂ ಇಲ್ಲ ಅಲ್ಲದಿದ್ದರೆ ನಿರಪರಾಧಿಗಳು ಈ ತರದ ಪೀಡೆಗೆ ಒಳಗಾಗುವಲ್ಲಿ ಯಾರಾದರೂ ನಿಲ್ಲುವರೇ? ಎಲ್ಲವೂ ಮಾಡುವುದು ಹೊಟ್ಟೆಗಾಗಿ, ಗೇಣುದ್ದ ಬಟ್ಟೆಗಾಗಿ, ಸುಡು ಈ ಹೊಟ್ಟೆಯನ್ನು. (ಅತ್ತ ಇತ್ತ ತಿರುಗುತ್ತಲಿರುವನು) ಅಯ್ಯೋ! ಏನು ಮಾಡಲಿ? ಹೇಗೆ ನಡೆದರೆ ಅನರ್ಥ ತಪ್ಪೀತು. ಸರಿ! ಗುಹೆಯಿಂದ ಮಗುವನ್ನು ತಪ್ಪಿಸಲೇ ಬೇಕು ಪರಮಾತ್ಮಾ ಈ ಕೆಲಸದಲ್ಲಿ ನನಗೆ ಯಶ ನೀಡು ದೇವಾ. ಸುನೀತಿ ದೇವಿಯವರ ಹೊಟ್ಟೆ ತಣ್ಣಗಾಗುವಂತೆ ಕರುಣಿಸು ದಯಾನಿಧೆ.

ಎರಡನೆ ದೃಶ್ಯ.

ಸ್ಥಳ— ಅರಮನೆ ಉತ್ತಾನಪಾದ ಮಹಾರಾಜರ ಅಂತಃಪುರ. ರಾಜರು ಕುಳಿತಿದ್ದಾರೆ.

(ಬಳಿಯಲ್ಲೇ ಉತ್ತಮ ಆಡುತ್ತಲಿದ್ದಾನೆ. ಪಹರೆಯವನ ಕೈಹಿಡಿದು ಧ್ರುವಕುಮಾರನ ಪ್ರವೇಶ.)

ಪಹರೆಯವ— (ಬದಿಯಲ್ಲಿ ನಿಂತು) ರಾಜರೇ ಅಪ್ಪಯ್ಯನನ್ನು ಕಣ್ತುಂಬ ನೋಡಿದಿರಲ್ಲವೇ? ಸಾಕು ಇನ್ನು ಮನೆಗೆ ಹೋಗೋಣ.

ಧ್ರುವ— (ಸಿಟ್ಟಿನಿಂದ) ಶನಿಹಿಡಿದಂತೆ ಹಿಡಿದಿದ್ದೀರಲ್ಲಾ. ಅಲ್ಲಿ ನನ್ನನ್ನು ತಡೆದಿರಿ ಕೈ ತಪ್ಪಿಸಿ ಓಡಿ ಬಂದೆ. ಇಲ್ಲಿ ಪುನಃ ಮುಂದುವರಿಯಲು ಬಿಡಲಾರಿರಿ. ಇನ್ನು ತಡೆಯಲಾರಿರಿ. ಆಗದು— ಎಂದಿಗೂ ಆಗದು. ಅಪ್ಪಯ್ಯನು ಎತ್ತಿಕೊಳ್ಳದೆ— ತೊಡೆಮೇಲೆ ಕೂತುಕೊಳ್ಳಿಸದೆ ಮನೆ ಸೇರಲಾರೆ. (ಕೈ ಬಿಡಿಸಿ ಓಡುವನು) ಅಪ್ಪಯ್ಯಾ ನನ್ನನ್ನು ಎತ್ತಿಕೊ ಅಪ್ಪಯ್ಯಾ. (ಪಹರೆಯವನು ಹಿಂದೆ ಸರಿಯುವನು ಉತ್ತಮ ಹಾಗೂ ಮಹಾರಾಜರ ತಟಸ್ಥರಾಗುವರು.)

ಧ್ರುವ— ಅಪ್ಪಯ್ಯಾ ನನ್ನ ಗುರ್ತ ಹತ್ತಲಿಲ್ಲವೇ? ನಾನು ನಿಮ್ಮ ಪುತ್ರ. ಸುನೀತಿ ದೇವಿಯವರ ಮಗ ಧ್ರುವ ಕುಮಾರ.

ಮಹಾರಾಜರು— ಯಾರು ಧ್ರುವಕುಮಾರನೇ! (ಓಡಿ ಬಂದು ಬಿಗಿದಪ್ಪುವನು. ಇಬ್ಬರೂ ಕ್ಷಣಕಾಲ ಹಾಗೇ ಇರುವರು)

ಉತ್ತಮ— ಅಪ್ಪಯ್ಯಾ ನನ್ನನ್ನೂ ಎತ್ತಿಕೊ. ಅಪ್ಪಯ್ಯಾ— ಅಪ್ಪಯ್ಯಾ ಏಕೆ ಮಾತನಾಡಲೊಲ್ಲೆ? ಅಪ್ಪಯ್ಯಾ (ಗಟ್ಟಿ ಕೂಗುವನು) (ಮಹಾರಾಜರು ಧ್ರುವನನ್ನು ಕೆಳಗಿಳಿಸಿ ಸೋಫಾದಲ್ಲಿ ಕುಳಿತು ಎರಡು ತೊಡೆಗಳ ಮೇಲೆ ಇಬ್ಬರು ಮಕ್ಕಳನ್ನು ಕೂತುಕೊಳ್ಳಿಸಿ ಇಬ್ಬರನ್ನೂ ಕಣ್ತುಂಬ ನೋಡುತ್ತಲಿರುವರು. ಒಳಗಿನಿಂದ 'ಉತ್ತಮ! ಉತ್ತಮ! ಮಗು ಉತ್ತಮ! ಏಕೆ ಕೂಗುತ್ತ ಇದ್ದೆ? ಏನಾಯ್ತು ಮಗು' ಎಂದೆನುತ್ತ ರಾಣಿ ಸುರುಚಿಯ ಪ್ರವೇಶ. ಧ್ರುವನನ್ನು ನೋಡಿ ತಟಸ್ಥಳಾಗಿ)

ಸುರುಚಿ— ಅದಾವ ಹಾರುವನ ಮಗು ಅರಸರ ತೊಡೆಮೇಲೆ ಕುಳಿತುಕೊಂಡಿದೆ. ಕೆಳಗಿಳಿ ಅರಸರ ತೊಡೆಯಿಂದ!

ಧ್ರುವ— (ನಗುತ್ತಾ) ನಾನಮ್ಮಾ ಧ್ರುವ! ನಿಮಗೆ ಪರಿಚಯ ಸಿಗಲಿಲ್ಲವೇ? ಸರಿ ನಿಮಗೆ ಸಿಗುವುದಾದರೂ ಹೇಗೆ? ನಾನು ಒಮ್ಮೆ ಕೂಡಾ ಇಲ್ಲಿ ಬಂದಿಲ್ಲ. ನೀವು ಒಮ್ಮೆಯಾದರೂ ನಮ್ಮಲ್ಲಿ ಕಾಲಿಡಲಿಲ್ಲ. ಪರಿಚಯವಾಗುವುದೆಂತು? ಅಮ್ಮಾ ನಾನು ಧ್ರುವಕುಮಾರ— ಸುನೀತಿಯವರ ಮಗ.

ಸುರುಚಿ— ಸರಿ ಸರಿ ಈಗ ತಿಳಿಯಿತು. ನೀನು ಸುನೀತಿಯ ಮಗನೇ? ಒಳ್ಳೆ ಮಾತಿನಿಂದ ಕೆಳಗಿಳಿಯುತ್ತೀಯಾ ನಾನೇ ಬಂದು ಕೆಳಗಿಳಿಸಲೇ?

ಧ್ರುವ— (ಮಹಾರಾಜರ ಮುಖನೋಡಿ) ಅಪ್ಪಯ್ಯಾ!

ಸುರುಚಿ— ಅಪ್ಪಯ್ಯಾ! ಅಪ್ಪಯ್ಯಾ! ಮುಚ್ಚು ಬಾಯಿ. ನಿನ್ನ ಸಾಹಸವೇ? ಕೆಳಗಿಳಿಯುತ್ತೀಯಾ? ಬಂದು ಕೆಳಗೆ ಎಳೆದು ಹಾಕಲೇ?

ಮಹಾರಾಜ— ಸುರುಚಿ!

ಧ್ರುವ— ಅಪ್ಪಯ್ಯಾ ನಾನೇ ಕೆಳಗಿಳಿಯುತ್ತೇನೆ. (ಕೆಳಗಿಳಿದು ನೇರಾಗಿ ಸುರುಚಿ ಬಳಿ ಬಂದು) ಅಮ್ಮಾ! ಉತ್ತಮನನ್ನು ಏಕೆ ಕೆಳಗಿಳಿಯಲು ಹೇಳುವುದಿಲ್ಲ? ನಾನೇನು ತಪ್ಪು ಮಾಡಿರುತ್ತೇನೆ. ಅವನು ಮಾಡಿದ ಒಪ್ಪೇನು? ಇದರ ಉತ್ತರ ಸಿಗದೆ ನಾನಿಲ್ಲಿಂದ ಕದಲಲಾರೆ. (ಕೈಕಟ್ಟಿ ನಿಲ್ಲುವನು.)

ಪಹರೆಯವ— (ಕಿವಿ ಕಣ್ಣುಗಳನ್ನು ಮುಚ್ಚಿ) ರಾಮ ರಾಮಾ! ಈಗ ಜ್ವಾಲಾಮುಖಿ ಸ್ಫೋಟನಗೊಳ್ಳುವುದು. ಹೇ ಪರಮಾತ್ಮಾ, ನನ್ನಿಂದ ನೋಡಲಾಗದು, ಕೇಳಲಾಗದು. ದಯಾನಿಧಿ, ದೀನಬಂಧು, ಭಕ್ತರಕ್ಷಕಾ, ಮಗುವನ್ನು ಕಾಪಾಡು–ಕಾಪಾಡು–ಕಾಪಾಡು.

ಧ್ರುವ— ಹೇಳಮ್ಮಾ! ತಂದೆಯ ತೊಡೆಯ ಮೇಲೆ ಕುಳಿತುಕೊಳ್ಳಲಾರದಷ್ಟು ನಾನು ಮಾಡಿದ ತಪ್ಪಾವುದು?

ಸುರುಚಿ— ತಪ್ಪೇ— ಹೇಳಲಾರದಷ್ಟು ತಪ್ಪಲ್ಲ. ಆದರೆ ನನ್ನ ಹೊಟ್ಟೆಯಲ್ಲಿ ಹುಟ್ಟದಿದ್ದುದೇ ಒಂದು ದೊಡ್ಡ ತಪ್ಪು.

ಧ್ರುವ— ಆ ತಪ್ಪಿಗೆ ಪರಿಹಾರವಿಲ್ಲವೇ? ಉತ್ತಮನಿಗೆ ಮಹಾರಾಜರು ಹೇಗೆ ಜನ್ಮದಾತರೊ ಹಾಗೆಯೇ ನನಗೂ ಜನ್ಮದಾತರಲ್ಲವೆ? ಆವಾಗ ತಪ್ಪೆಲ್ಲಿ?

ಸುರುಚಿ— ತಪ್ಪಿರುವುದು ಅಲ್ಲಿ. ನೀನು ನಿನ್ನ ತಾಯಿಯ ಉದರದಲ್ಲಿ ಜನ್ಮ ತಾಳದೆ ನನ್ನ ಉದರದಲ್ಲಿ ಜನ್ಮತಾಳಿದ್ದಾದರೆ ನಿನಗೂ ಅಧಿಕಾರ ಸಿಗುತ್ತಿತ್ತು.

ಧ್ರುವ— ಹಾಗೇನು? (ಮಹಾರಾಜರ ಕಡೆ ತಿರುಗಿ) ಅಪ್ಪಯ್ಯಾ! ಇದಕ್ಕೆ ನೀವೇನನ್ನುತ್ತೀರಿ? ಅಪ್ಪಯ್ಯಾ ತಲೆಬಾಗಿಸಿದಿರೇಕೆ? ನನ್ನ ಪ್ರಶ್ನೆಗೆ ಉತ್ತರಕೊಡಿ ಅಪ್ಪಯ್ಯಾ?

ಸುರುಚಿ— 'ಅಪ್ಪಯ್ಯಾ ಅಪ್ಪಯ್ಯಾ!' ತೊಲಗುತ್ತೀಯೊ ಇಲ್ಲವೊ? ಇಲ್ಲಿಂದ ಹೋಗಾಚೆ-ದೇವರೊಡನೆ ಮೊರೆಯಿಡು. ಬರುವ ಜನ್ಮದಲ್ಲಿಯಾದರೂ ನನ್ನಲ್ಲಿ ಜನ್ಮತಾಳುವಂತೆ ಬೇಡಿಕೊಂಡು ನನ್ನ ಮಗನಾಗಿಹುಟ್ಟು.

ಧ್ರುವ— ಈ ಜನ್ಮದಲ್ಲಿ ಸಾಧ್ಯವಿಲ್ಲವೇ? ದೇವರಲ್ಲಿ ಬೇಡಿದಲ್ಲಿ ಸಿಗಲಾರದೆ?

ಸುರುಚಿ— ನನ್ನ ಮಾತಿಗೆ ಎದಿರಾಡುತ್ತೀಯಾ? ಯಾರಲ್ಲಿ? ಈ ಮಗುವನ್ನು ರಾಜದ್ವಾರದಿಂದ ಹೊರಗೆ ದೂಡಿಬಿಡಿ. ಧ್ರುವಕುಮಾರ ನಡಿ ಹೊರಗೆ. ಯಾರಲ್ಲಿ? ದ್ವಾರಪಾಲಕರೆಲ್ಲಿ? ಯಾರೂ ಇದಿರು ಬಾರದಿರಲು ಕಾರಣವೇನು? ಪಹರೆಯವರೆಲ್ಲಿ? (ಗಟ್ಟಿಕೂಗುವಳು)

(ನಡುಗುತ್ತ ಪಹರೆಯುವನ ಪ್ರವೇಶ)

ಸುರುಚಿ— ಪಹರೆಗಾರ! ನಿನ್ನ ತಪ್ಪಿನಿಂದಾಗಿ ಇಂದು ರಾಜಮಹಲಿನಲ್ಲಿ ಅಕ್ರಮ ಪ್ರವೇಶವಾಗಿದೆ. ಇನ್ನು ಮುಂದೆ ಇಂತಹ ಘೋರ ಪ್ರಮಾದ ನಡೆದಲ್ಲಿ ಆಗುವ ಪರಿಣಾಮಕ್ಕೆ ನೀನೇ ಹೊಣೆಗಾರ. ಈ ಮಗುವನ್ನು ಕೊಂಡ್ಯೊದು ರಾಜಮಾರ್ಗದಲ್ಲಿ ಬಿಟ್ಟು ಬಾ. (ಧ್ರುವನ ಕೈ ಹಿಡಿದು ಎಳೆದು ಕೊಂಡ್ಯೊವಳು)

(ಧ್ರುವ ಬಿಕ್ಕಿ ಬಿಕ್ಕಿ ಅಳುತ್ತಾ, ತಂದೆಯು ಕಡೆ ನೋಡುತ್ತಲಿದ್ದಂತೆ ಪಹರೆಯುವನು ಅವನನ್ನು ಎತ್ತಿ ಕೊಂಡೊಯ್ಯುವನು.)

(ತೆರೆ ಬೀಳುವುದು)

ಮೂರನೇ ದೃಶ್ಯ

(ಸ್ಥಳ— ಅರಮನೆಯ ಮಹಾದ್ವಾರ. ಕೂಗುತ್ತಲಿದ್ದ ಧ್ರುವಕುಮಾರನನ್ನೆತ್ತಿ ಪಹರೆಯವನ ಪ್ರವೇಶ ಮಗುವನ್ನು ಕೆಳಗಿಳಿಸಿ ಪಹರೆಯವ ಮಗುವಿನ ಕಣ್ಣುಗಳನ್ನು ಒರಸುತ್ತಾ ತನ್ನ ಕಣ್ಣುಗಳನ್ನು ಒರಸುತ್ತಾನೆ.)

ಪಹರೆಯುವ— ಅಳಬೇಡಿ ಮಹಾರಾಜರೇ, ಅಳಬೇಡಿ. ಕಣ್ಣೊರಸಿಕೊಂಡು ಒಮ್ಮೆ ನಕ್ಕು ಬಿಡಿ, ಎಲ್ಲಿ! ಎಲ್ಲಿ! ನಗಿರಿ ನೋಡುವಾ.

(ಧ್ರುವ ಕುಮಾರ ಬಿಕ್ಕಿ ಬಿಕ್ಕಿ ಅಳುತ್ತಾನೆ.)

ಪಹರೆಯುವ— ಛೆ ಛೆ! ನಿಮ್ಮ ಅಶ್ರುಬಿಂದುಗಳು ಭೂಮಿಯಲ್ಲಿ ಬೀಳಬಾರದು ಮಹಾರಾಜರೇ, ಆದರಿಂದಾಗಿ ಪ್ರಳಯವಾದೀತು. ಮಹಾ ಅನರ್ಥವಾದೀತು. ನೋಡಿ ನೀವು ಶಾಲೆಯಿಂದ ಮನೆಗೆ ಹೋಗುವ ಹೊತ್ತಾಯಿತು. ನಿಮ್ಮಮ್ಮ ನಿಮ್ಮನ್ನೆಷ್ಟು ಕಾಯುತ್ತಾರೊ?

ಧ್ರುವ— (ಕಣ್ಣೊರಸುತ್ತಾ) ನಮ್ಮಮ್ಮ ನನ್ನನ್ನು ಕಾಯುತ್ತಾಳೆಯೇ? ನಮ್ಮ ವಸತಿಯ ಮಕ್ಕಳೆಲ್ಲಾ ಮನೆ ಸೇರಿದರೇ?

ಪಹರೆ— ಹೌದು ರಾಜರೇ! ಮಕ್ಕಳು ಮನೆ ಸೇರುವ ಹೊತ್ತಾಯ್ತು. ನೀವು ನಿಮ್ಮ ಮುಖವನ್ನು ಶಾಂತವಾಗಿಟ್ಟುಕೊಂಡು ಮನೆಗೆ ನಡೆಯಿರಿ. ಬಾಡಿದ ನಿಮ್ಮ ಮುಖ ನೋಡಿದರೆ ಅಮ್ಮ ಏನೆಂದಾರು?

ಧ್ರುವ— ನನ್ನ ಮುಖ ಬಾಡಿದೆಯೇ? ನನ್ನ ಕಣ್ಣು ಕೆಂಪಗಾಗಿವೆಯೇ? ಇಲ್ಲ ಇಲ್ಲ ನನ್ನ ಕಣ್ಣಿಂದ ಕಂಬನಿಗಳು ಸುರಿಯಲಾರವು, ಕಣ್ಣೊರಸುತ್ತಲಿದ್ದಂತೆ ಈ ನೀರು ಎಲ್ಲಿಂದ ಬರುತ್ತದೆ? ಪಹರೆಗಾರ! ಅಯ್ಯೊ ನನ್ನ ಕಣ್ಣಲ್ಲಿ ನೀರೇಕೆ? ಇದನ್ನು ತಡೆಗಟ್ಟುವುದು ಹೇಗೆ? (ಬಿಕ್ಕಬಿಕ್ಕಿ ಅಳುತ್ತಾನೆ.)

ಪಹರೆ— ರಾಜರೇ ಅಳಬೇಡಿ. ನಾನೇ ನಿಮ್ಮನ್ನು ಮನೆಮುಟ್ಟಿಸುತ್ತೇನೆ ಬನ್ನಿ ಎತ್ತಿಕೊಳ್ಳಲೇ?

ಧ್ರುವ— ಬೇಡ. ನಾನೇ ನಡೆದು ಹೋಗುವೆ. ನೀವು ನನ್ನನು ಬಿಡಲು ಬಂದರೆ ನಿಮ್ಮ ಕಾವಲಿನ ಕೆಲಸಕ್ಕೆ ತೊಂದರೆ ಬಂದೀತು. ನನಗೆ ಅಳಬೇಡವೆಂದು ನಿಮ್ಮ ಕಣ್ಣಲ್ಲಿ ನೀರೇಕೆ? ಅಯ್ಯೋ ನೀವು ಕೂಗುವುದೇತಕ್ಕೆ?

(ಪಹರೆಯುವ ತನ್ನ ಶಾಲಿನಿಂದ ಮುಖ ಮುಚ್ಚಿ ಅಳುತ್ತಾನೆ. ಧ್ರುವ ಅವನ ಕಣ್ಣು ಒರಸಿ ಸಂತೈಸುತ್ತಾನೆ.)

ಧ್ರುವ— ಕೂಗಬೇಡಿ. ನೀವು ಕೂಗಿದರೆ ನನಗೂ ಕೂಗು ಬರುತ್ತದೆ. ಸರಿ ನಿಮ್ಮ ಕಣ್ಣು ಒರಸಿ ನಗಿರಿ ನೋಡ.ವಾ; ಸರಿ ನೀವು ನಕ್ಕರೆ ನನಗೂ ನಗು ಬರುವುದು; ನಗಿರಿ.

(ಇನ್ಸ್ಪೆಕ್ಟರ್ ಪಹರೆಗಾರನ ಪ್ರವೇಶ.)

ಪಹರೆ— ಏನಾಯ್ತು ದಾಮಣ್ಣ ಇದಾರ ಮಗು?

ದಾಮಣ್ಣ— ಮುತ್ತಾಳಾ ಕಣ್ಣಿದ್ದು ಕುರುಡನೇ? ಯಾರೆಂದು ಬಗೆದಿ. ಯುವರಾಜರಾದ ಧ್ರುವ ಕುಮಾರರಲ್ಲವೇ?

ಪಹರೆ— (ಗಲ್ಲಗಳನ್ನು ಬಡಿದುಕೊಂಡು) ತಪ್ಪಾಯ್ತು ದಾಮಣ್ಣನವರೇ. ಮಹಾರಾಜರೇ! ಅಪರಾಧವನ್ನು ಕ್ಷಮಿಸೋಣಾಗಲಿ. (ಧ್ರುವ ಕುಮಾರನನ್ನು ನಮಸ್ಕರಿಸುವನು)

ಧ್ರುವ— ದಾಮಣ್ಣ! ಮನೆಯತ್ತಕಡೆ ಹೋಗೋಣ ಇಲ್ಲಿ ಬಂದಂದಿನಿಂದ ಜನ್ಮದಾರಭ್ಯ ನನ್ನಲ್ಲಿದ್ದ ಶಾಂತಿ ಎತ್ತಲೋ ಹೊರಟು ಬಿಟ್ಟಂತಿದೆ. ಅಮ್ಮನು ನನ್ನನ್ನು ಕಾಯುತ್ತಿರಬೇಕು. ಹೋಗೋಣ.

(ಇಬ್ಬರೂ ಹೋಗುವರು. ಪಹರೆದಾರ ಪಹರೆ ನಡೆಸುವನು. ತೆರೆ ಬೀಳುವುದು.)

ನಾಲ್ಕನೇ ದೃಶ್ಯ.

ಸ್ಥಳ— ಸುನೀತಿ ಮಹಾರಾಣಿಯವರ ಮನೆ. ಇದಿರಲ್ಲಿ ಶೇಷಶಯನ ಚಿತ್ರವನ್ನು ತೂಗಹಾಕಿದ್ದಾರೆ. ಅದರ ಇಬ್ಬದಿಗಳಲ್ಲಿ ಎರಡು ದೀಪಗಳು ಉರಿಯುತ್ತಲಿವೆ. ದೇವರಿಗೆ ತುಲಸಿ ಮತ್ತು ಹೂವಿನ ಹಾರ ತೊಡಿಸಲ್ಪಟ್ಟಿದೆ. ಸುನೀತಿ ಯಾವುದೋ ಗ್ರಂಥವನ್ನು ಓದುತ್ತಾ ಕುಳಿತಿದ್ದಾಳೆ.

ಸುನೀತಿ— ಇಂದು ಪಾಠಶಾಲೆ ಬಿಡುವ ಹೊತ್ತಾದರೂ ಮಗು ಬಂದಿಲ್ಲವೇಕೆ? ಎಂದೂ ಹೀಗೆ ಹೊತ್ತುಮಾಡಿದವನಲ್ಲ. (ಚಿಂತೆಯಿಂದ ಶ್ವಾಸ ಬಿಡುತ್ತಾ) ನಿನ್ನೆ ಮಾತ್ರ ಮಗು ಶಾಲೆಯಿಂದ ಬರುವಾಗ ಹೊತ್ತು ಮೀರಿತ್ತು. ನಗುಮೊಗದಿಂದ ಬರುವ ಮಗು ಬಾಡಿದ ಮುಖದಿಂದ ಕಂಬನಿ ತುಂಬಿದ ಕಣ್ಣುಗಳಿಂದ ಮನೆ ಸೇರಿತ್ತು. ಅದನ್ನು ನೋಡಿ

ದೊಡನೆ ನಾನು ನಡುಗಿದೆ. ಒಳಗೆ ಬಂದವನೇ "ಅಮ್ಮಾ ನನ್ನ ಅಪ್ಪ ನಾರು?" ಎಂದು ಮಗು ಕೇಳಿತು. ಮಗು ಹುಟ್ಟಿದಂದಿನಿಂದ, ಮಗುವಿಗೆ ಬುದ್ಧಿ ಬಂದಂದಿನಿಂದ ಯಾವುದನ್ನು ಮರೆಮಾಡಿಡಲು ಪ್ರಯತ್ನಿಸುತ್ತಿದ್ದೆನೋ ಅದೆಲ್ಲವೂ ಬಹಿರಂಗಪಡಿಸಬೇಕಾಯಿತು. "ಈ ರಾಜ್ಯವನ್ನು ನ್ಯಾಯದಿಂದ ಧರ್ಮದಿಂದ ಪರಿಪಾಲಿಸುವ ಮಹಾರಾಜರಾದ ಉತ್ತಾನಪಾದ ಮಹಾರಾಜರೇ ನಿನ್ನ ಜನ್ಮದಾತರು." ಎಂದೊಡನೆ ಮಗುವಿನ ಕಣ್ಣುಗಳು ಅರಳಿದುವು, ಮುಖ ಪ್ರಫುಲ್ಲವಾಯ್ತು. ಸಂತೋಷದಿಂದ ಮಗು ಕುಣಿದಾಡಿತು. ನನ್ನನ್ನು ಬಿಗಿದಪ್ಪಿತು. ಅಮ್ಮಾ ನಾನು ನಾಳೆ ಪಾಠಶಾಲೆಗೆ ಹೋದವನೇ ಈ ರಾಜ್ಯವನ್ನು ಆಳುವ ಅರಸನೇ ನನ್ನ ಪಿತನು ಎಂದು ಮಕ್ಕಳಿಗೆ ಹೇಳುತ್ತೇನೆ ಎಂದಿತು. ಅಯ್ಯೋ! ಇಷ್ಟು ದಿನ ಇದನ್ನು ನೀನು ಏಕೆ ಹೇಳಲಿಲ್ಲವಮ್ಮ! ನಾನು ಕೇಳಿಲ್ಲವೆಂದು ಹೇಳಲಿಲ್ಲವೇನಮ್ಮಾ! ಎಂದು ನನ್ನ ಕೊರಳನ್ನು ಬಿಗಿದಪ್ಪಿತು. ಪರಮಾತ್ಮಾ! ಮಗುವಿನ ಸಂತೋಷದ ಪ್ರತಿಯೊಂದು ಅಲೆ ನನ್ನನ್ನು ರಸಾತಳಕ್ಕೆ ನೂಕುತ್ತಿತ್ತು. ಇಂದು ಮಗು ಇನ್ನೂ ಬರಲಿಲ್ಲವೇಕೆ? ಎಲ್ಲಿಯಾದರೂ ಮಗು ಎಲ್ಲಿಯಾದರೂ— ಅಲ್ಲಿ—ಅಲ್ಲಿ— ಹೋದನೇ! (ತಲೆ ಬಡಿದುಕೊಂಡು) ಅಕಟಕಟಾ! ಈಗೇನು ಮಾಡಲಿ ಯಾರನ್ನು ಕಳುಹಿಸಲಿ! ಕರೆಯದೆ ಬರಬಾರದೆಂಬ ಪತಿಯಾಜ್ಞೆಯನ್ನು ಶಿರಸಾವಹಿಸಿ ಮನೆಯಿಂದ ಹೊರಟವಳು ನಾನು, ನನ್ನ ಮಗು ಕರೆಯದೆ ಅಲ್ಲಿ ಹೋದಾಗ ಏನಾದೀತು? ಎಂತಾದೀತು? ಅಯ್ಯೋ! ನನ್ನ ಬಲ ಕಣ್ಣು ಹಾರುತ್ತದೇಕೆ? ಈ ಕೆಟ್ಟ ಶಕುನವೇಕೆ? ದೇವಾ! ಈ ಸಂಕಟದಿಂದ ನನ್ನನ್ನು ಕಾಪಾಡು.

(ಕಣ್ಣುಗಳನ್ನು ಒರಸುತ್ತಾ ಪಹರೆಯವನೊಡನೆ ಧ್ರುವ ಕುಮಾರನು ಪ್ರವೇಶಿಸುವನು. ಪಹರೆಯವ ಹಿಂದೆ ಸರಿಯುವನು)

ಸುನೀತಿ— ಧ್ರುವಕುಮಾರ ಎಲ್ಲಿ ಹೋಗಿದ್ದೀಯಾ? ಇಷ್ಟು ಹೊತ್ತೇಕೆ?

ಧ್ರುವ— 'ಅಮ್ಮಾ' (ಎಂದು ಓಡಿ ಹೋಗಿ ತಾಯನ್ನು ಬಿಗಿದಪ್ಪಿ ಬಿಕ್ಕಿ ಬಿಕ್ಕಿ ಅಳತೊಡಗುವನು.)

ಸುನೀತಿ— ಏನಾಯ್ತು? ತಲೆ ನೋಯುತ್ತದೆಯೇ? (ತಲೆ ತಿಕ್ಕುವಳು) ಎಲ್ಲಿಯಾದರೂ ಬಿದ್ದುಬಿಟ್ಟೆಯಾ? (ಧ್ರುವ ತಲೆಯಲ್ಲಾಡಿಸಿ ಕೂಗುತ್ತಲಿರುವನು.) ಯಾರಾದರೂ ಹೊಡೆದರೇ? ಏನಾಯ್ತು ಹೇಳು ಧ್ರುವ ಕುಮಾರ ಮಾತನಾಡಲೊಲ್ಲೆ ಏಕೆ?

(ಸುನೀತಿ ಧ್ರುವನನ್ನು ಸಮಾಧಾನಪಡಿಸಲು ಯತ್ನಿಸುತ್ತಲಿದ್ದಂತೆ ಅವನು ಮತ್ತೆ ಮತ್ತೆ ಅಳತೊಡಗಿದನು. ಪಹರೆಗಾರನು ಮುಂದೆ ಬರುವನು.)

ಸುನೀತಿ— ದಾಮಣ್ಣ ನೀನು—ಇಲ್ಲಿ ಮಹಾರಾಜರು ನಮ್ಮನ್ನು ಕರೆಯಲು ಕಳುಹಿಸಿದರೇ? ದಾಮಣ್ಣ ಅದೇಕೆ ನಿನ್ನ ಕಣ್ಣಲ್ಲಿ ನೀರು? ಧ್ರುವ ಕುಮಾರನಂತೆ ನೀನು ಬಿಕ್ಕಿ ಬಿಕ್ಕಿ ಅಳಲು ಪ್ರಾರಂಬಿಸಿದಿಯಲ್ಲಾ. ಅಳುತ್ತಿರುವಿ ಏಕೆ? (ಆಲೋಚಿಸಿ) ಸರಿ! ಸರಿ! ಈಗೆಲ್ಲ ನನಗೆ ಅರ್ಥವಾಯ್ತು. ಧ್ರುವಕುಮಾರ! ಅಳು ನಿಲ್ಲಿಸು! ನಡೆದ ಸಮಾಚಾರ ನನಗೆ ತಿಳಿಸು. (ಧ್ರುವನು ಅಳುವನ್ನು ನಿಲ್ಲಿಸಿ)

ಧ್ರುವ— ಅಮ್ಮಾ! ನಾನು ನಿನ್ನನ್ನು ಕೇಳದೆ ಒಂದು ಕೆಲಸ ಮಾಡಿದೆ. ನಾನು ಇಂದು ಅಪ್ಪಯ್ಯನನ್ನು ನೋಡಲು ಹೋದೆ.

ಸುನೀತಿ— ಆದಕ್ಕಾಗಿ ಅಳಬೇಕೇ ಕಂದಾ? ಅಲ್ಲೇನಾಯಿತು?

ಧ್ರುವ—ನಾನು ಅಲ್ಲಿ ಹೋದೆ. ಹೋಗುವಾಗ ಹಾದಿಯಲ್ಲಿ ಇವರು ಸಿಕ್ಕಿದರು. ನಾನು ಒಳಗೆ ಹೋದೆ......

ಸುನೀತಿ— ಅವರು ಕರೆಯದೆ ಒಳಗೆ ಹೋದೆಯಾ?

ಧ್ರುವ— ಅಪ್ಪನ ಮನೆಗೆ ಹೋಗಲು ಕರೆಯಬೇಕೆ ಅಮ್ಮಾ?

ಸುನೀತಿ— ಆಗ ಕೂಗುವುದೇತಕ್ಕೆ?

ಧ್ರುವ— ಒಳಗೆ ಹೋದೆ ಅಲ್ಲಿ—ಅಲ್ಲಿ—

ಸುನೀತಿ— ಅಲ್ಲಿ ಯಾರಿದ್ದರು? ಬೇಗ ಹೇಳು.

ಧ್ರುವ— ಒಂದು ಮಗು ಮತ್ತು ಒಂದು ತಾಯಿ ಅಂದರೆ ಅಮ್ಮಾ ನನಗೊಬ್ಬ ತಮ್ಮ ಮತ್ತು ಚಿಕ್ಕ ತಾಯಿ ಇರುವರೆಂದು ನೀನು ನಿನ್ನೆಯೇ ಏಕೆ ಹೇಳಲಿಲ್ಲವಮ್ಮಾ?

ಸುನೀತಿ— — — — — —

ಧ್ರುವ— ಏಕೆ ಉತ್ತರ ಕೊಡಲಾರೆ.

ಸುನೀತಿ— ಚಿಕ್ಕ ತಾಯಿ ನಿನ್ನನ್ನು ಗುರುತಿಸಿದಳೇ?

ಧ್ರುವ— ಅಮ್ಮಾ ಅಪ್ಪಯ್ಯ ಬಂದರು ನನ್ನ ತಮ್ಮನನ್ನು ಎತ್ತಿಕೊಂಡರು. ನಾನೂ ಓಡಿ ಹೋಗಿ ಅವರನ್ನು ಬಿಗಿದಪ್ಪಿದೆ ಅಮ್ಮಾ! ಹೇಗೆ ಬಿಗಿದಪ್ಪಿದೆ (ಸುನೀತಿಯನ್ನು ಬಿಗಿದಪ್ಪುವನು) ಅವರು ನನ್ನನ್ನು ತನ್ನ ತೊಡೆ ಮೇಲೆ ಕೂತುಕೊಳ್ಳಿಸಿದರು. (ಅಳುಬರುವುದು.)

ಸುನೀತಿ— ಅಪ್ಪಯ್ಯನ ತೊಡೆ ಮೇಲೆ ಕುಳಿತುದುದಕ್ಕೇ ಈ ಕೂಗು ಈ ಅಳು (ನಗುವಳು)

ಧ್ರುವ— ಅಮ್ಮಾ ನೀನು ನಗುತ್ತಿ? (ಅಳಲು ಪ್ರಾರಂಭಿಸಿದನು.)

ಸುನೀತಿ— ನಾನು ನಗದೇ ಅಳಲೇ ಧ್ರುವಕುಮಾರ?

ಧ್ರುವ— ಅಲ್ಲಮ್ಮಾ-ಅಪ್ಪಯ್ಯನ ತೊಡೆಮೇಲೆ ಕೂತುಕೊಂಡುದುದಕ್ಕೆ ಚಿಕ್ಕಮ್ಮ ಏನೇನೋ ಅಂದಳು.

ಸುನೀತಿ— (ಗಾಬರಿಗೊಂಡು) ಏನಂದಳು. ಹೇಳು ಮಗು.

ಧ್ರುವ— ಏನಿಲ್ಲ! ನಾನು ಅಪ್ಪಯ್ಯನ ತೊಡೆಯ ಮೇಲೆ ಕುಳಿತುಕೊಳ್ಳಬೇಕಾದರೆ ಅವಳ ಮಗನಾಗಿ ಹುಟ್ಟಬೇಕಿತ್ತಂತೆ.

ಸುನೀತಿ— ನಿಜ ಮಗು! ಅವಳಂದುದು ಸತ್ಯ. ಈ ಪಾಪಿಯ ಹೊಟ್ಟೆಯಲ್ಲಿ ಹುಟ್ಟಿದುದರಿಂದ ನೀನು ತಂದೆಯ ತೊಡೆಯ ಮೇಲೆ ಕುಳಿತುಕೊಳ್ಳುವ ಭಾಗ್ಯವನ್ನು ಕಳಕೊಂಡಿ.

ಧ್ರುವ— ಬರುವ ಜನ್ಮದಲ್ಲಿ ದೇವರೊಡನೆ ಬೇಡಿಕೊಂಡು ಅವಳ ಮಗನಾಗಿ ಹುಟ್ಟಬೇಕೆಂದರು.

ಸುನೀತಿ— ನಾರಾಯಣಾ! ಇಷ್ಟರ ವರೆಗೆ ಸಹನಾ ಶಕ್ತಿಯನ್ನು ದಯಪಾಲಿಸಿದ ನೀನು ಈಗ ನನ್ನ ಕೈ ಬಿಡುವಿಯಾ? ಪ್ರಭೋ ಈ ಬಾರಿ ಮಾತ್ರ ಕೈ ಬಿಡಬೇಡ.

ಧ್ರುವ— ಅಮ್ಮಾ ದೇವರನ್ನು ಅನನ್ಯವಾಗಿ ಭಜಿಸಿದರೆ ಬೇಡಿದ್ದು ಸಿಕ್ಕುತ್ತದೆಂದು ನೀನು ಹೇಳುತ್ತಿದ್ದಿಯಲ್ಲವೇನಮ್ಮಾ?

ಸುನೀತಿ— ನಿಜ ಮಗು.

ಧ್ರುವ— ಹಾಗಾದರೆ ಮುಂದಿನ ಜನ್ಮದಲ್ಲಿ ಚಿಕ್ಕಮ್ಮನ ಮಗನಾಗಿ ಹುಟ್ಟಿ ತಂದೆಯ ತೊಡೆಯ ಮೇಲೆ ಕುಳಿತುಕೊಳ್ಳುವ ಭಾಗ್ಯ ಬೇಡುವುಕ್ಕಿಂತ ಇದೇ ಜನ್ಮದಲ್ಲಿ— ನಿನ್ನ ಹೊಟ್ಟೆಯಲ್ಲಿ ಜನ್ಮತಾಳಿದಾಗ ಅದನ್ನು ಸಾಧ್ಯಮಾಡಲಾಗದೇ?

ಸುನೀತಿ— ನಿಜ ಮಗು.

ಧ್ರುವ—ದೇವರೆಲ್ಲಿದ್ದಾನೆ ಹೇಳು? ಅವನನ್ನು ಪಡೆಯುವುದೆಂತು? ಹೇಳಮ್ಮಾ.

ಸುನೀತಿ— ದೇವರೆ! ದೇವರು—ಎಲ್ಲೆಲ್ಲಿಯೂ ಇದ್ದಾನೆ. ಆದರೆ ಅವನನ್ನು ಕಾಣಬೇಕಾದರೆ ಅರಣ್ಯಕ್ಕೆ ಹೋಗಿ ತಪಸ್ಸು ಮಾಡಬೇಕು. ಆಗ ಮಾತ್ರ ದೇವರನ್ನು ಕಾಣಬಹುದು.

ಧ್ರುವ— ಹಾಗಾದರೆ ನಾನು ಅರಣ್ಯಕ್ಕೆ ಹೋಗಲೇನಮ್ಮಾ?

ಸುನೀತಿ—ಬೇಡ ಮಗು ಅರಣ್ಯದಲ್ಲಿ ಕಾಡುಮೃಗಗಳಿವೆ. ಹೋಗಲು ಹಾದಿ ಸಿಗದು. ತಿನ್ನಲು ಅನ್ನ ಸಿಗದು ತಪಸ್ಸು ಆಚರಿಸುವುದು ಬಹಳ ಕಷ್ಟವಾದ ಕೆಲಸ.

ಧ್ರುವ— ಅಮ್ಮಾ ಪರಮಾತ್ಮನನ್ನು ನೆನೆದರೆ ಎಲ್ಲಾ ದುಃಖ ಕಷ್ಟಗಳು ದೂರವಾಗುತ್ತವೆಂದು ನೀನು ಹೇಳುತಿದ್ದಿಯಲ್ಲವೇ? ಆಗ ದುಃಖ ಕಷ್ಟ ದೂರಮಾಡುವ ದೇವರು ಅವರನ್ನು ನೋಡಲು ನಾನು ಹೋದಾಗ ನನಗೆ ಕಷ್ಟ ಕೊಡುವನೇನು?

ಸುನೀತಿ— ನೀನು ಇಲ್ಲೇ ಇದ್ದು ದೇವರನ್ನು ಭಜಿಸು ಮಗು.

ಧ್ರುವ— ಹಾಗೆ ಹೇಳಬೇಡವಮ್ಮಾ. ನನಗೆ ಆದಷ್ಟು ಬೇಗ ಅಪ್ಪನ ತೊಡೆ ಮೇಲೆ ಕುಳಿತುಕೊಳ್ಳಬೇಕಾಗಿದೆ. ಇಲ್ಲಿ ನಿಂತಲ್ಲಿ ದೇವರನ್ನು ಸ್ಮರಿಸಲು ಸಾಕಾಗುವಷ್ಟು ಹೊತ್ತು ಸಿಗಲಾರದು. ಅರಣ್ಯಕ್ಕೆ ಹೋಗಿ ಆದಷ್ಟು ಬೇಗ ದೇವರನ್ನು ಕಂಡು ಬೇಗ ಬರುವೆನವಮ್ಮಾ. ನೀನಿಲ್ಲೇ ಇದ್ದುಕೊಂಡು ನನಗೆ ಕಷ್ಟ ಬರಬಾರದೆಂದು ದೇವರನ್ನು ಬೇಡುತ್ತಲಿರು.

ಸುನೀತಿ— (ಸ್ವಗತ) ದೇವರೇ ಈ ಮಗುವಿಗೇತಕ್ಕೆ ಈ ಬಗೆಯ ಬುದ್ಧಿ ಕೊಟ್ಟೆ? ಕೈ ಹಿಡಿದ ಗಂಡ ಕೈ ಬಿಟ್ಟರೂ ಸವತಿ ಮನೆಯಿಂದ ಹೊರಕ್ಕಟ್ಟಿದರೂ ಈ ಮಗುವನ್ನು ಕಂಡು - ನಿನ್ನನ್ನು ಭಜಿಸಿ ದಿನ ಕಳೆಯುತ್ತಿದ್ದೆ. ಇದೂ ಕೂಡಾ ನನಗೆ ಸಿಗಲಾರದಷ್ಟು ನಾನು ಮಾಡಿದ ಪಾಪವಾವುದು ಪರಮಾತ್ಮಾ? ಇನ್ನೇತಕ್ಕೀ ಜೀವನ? (ಪ್ರಕಟವಾಗಿ) ಮಗು ಧ್ರುವಕುಮಾರ ನೀನು ನನ್ನನ್ನು ಬಿಟ್ಟು ಹೋಗುತ್ತಿಯಲ್ಲ ನಾನೊೋರ್ವಳೆ ಇಲ್ಲಿ ಹೇಗೆ ದಿನ ಕಳೆಯಲಿ? ನನಗೋರ್ವಳಿಗೆ ನಿಲ್ಲಲು ಹೆದರಿಕೆಯಾಗುವುದಿಲ್ಲವೇ ಕಂದಾ.

ಧ್ರುವ— ಕಾಡುಮೃಗಗಳಿಂದ ತುಂಬಿದ ಕಾಡಿಗೆ ಹೋಗುವಾಗ ಬೆದರದ ನನ್ನ ತಾಯಿಯಾದ ನಿನಗೆ ಪಟ್ಟಣದ ಮಧ್ಯದಲ್ಲಿರಲು ಬೆದರಿಕೆಯೇ? ಎಲ್ಲರನ್ನು ಕಾಪಾಡುವ ದೇವರು ನಿನ್ನನ್ನು ಕಾಪಾಡಲಾರನೇ? ಅಮ್ಮಾ ನಿಜಕ್ಕೂ ನಾನು ದೇವರನ್ನು ಕಂಡೊಡನೆ ಒಂದೇ ಒಂದು ಗಳಿಗೆ ಹಾಳುಮಾಡದೆ ನೇರಾಗಿ ನೀನಿದ್ದಲ್ಲಿ ಬರುತ್ತೇನಮ್ಮಾ. ಅಷ್ಟರ ತನಕ ಇಂದು ಅರಮನೆಯಿಂದ ಬಂದ ಪಹರೆಯವನು ಬೇಕಾದರೆ ಅಪ್ಪಯ್ಯನನ್ನು ಕೇಳಿ ಇಲ್ಲಿರಲಮ್ಮಾ!

ಸುನೀತಿ— ಬೇಡ ಮಗು ಅವನ ಸಂಸಾರವನ್ನು ಪೋಷಿಸುವ ಚಾಕರಿಯನ್ನು ಬಿಡಿಸಬೇಡ ನಾನೋರ್ವಳೆ ಇಲ್ಲಿ ನಿಲ್ಲುವೆನು.

ದಾಮಣ್ಣ-- (ಮುಂದೆ ಬಂದು) ಮಹಾರಾಣಿಯವರೇ ಉಂಟು ಮಾಡಿದ ದೇವರು ಊಟ ಬಟ್ಟೆಗೆ ಮುಂಚೆಯೇ ಗೊತ್ತುಪಡಿಸಿದ್ದಾನೆ. ಯಾವಾಗ ಧ್ರುವಕುಮಾರರನ್ನು ಕಿರಿಯ ಮಹಾರಾಣಿಯವರು ರಾಜಮಹಲಿನಿಂದ ಹೊರ ಹೊರಡಿಸಿದರೊ ಆಗಲೇ ನಾನು ಇನ್ನು ಮುಂದೆ ಅಂತಹ ಅನ್ಯಾಯವೆಸಗುವ ಸ್ಥಳದಲ್ಲಿ ಕಾಲಿಡಲಾರನೆಂದೇ ಮನಸ್ಸಿನಲ್ಲಿ ಶಪಥ ಮಾಡಿಯೇ ಧ್ರುವ ಕುಮಾರರನ್ನು ಎತ್ತಿಕೊಂಡು ಬಂದಿರುತ್ತೇನೆ.

ಧ್ರುವ— ಅಮ್ಮಾ ನಾನಿನ್ನು ಹೊರಡಲೇ? ನನ್ನನ್ನು ಆಶೀರ್ವದಿಸು

(ಸುನೀತಿಯ ಪಾದಗಳಿಗೆ ನಮಸ್ಕರಿಸುವನು)

ಸುನೀತಿ— ಕಂದಾ! ಮೊದಲಾಗಿ ದೇವರನ್ನು ವಂದಿಸು, ಅವನೇ ನಿನ್ನನ್ನು ಕಾಪಾಡುವವನು. ದಯಾನಿಧೇ, ಭಕ್ತವತ್ಸಲಾ ನನ್ನ ಈ ಮಗು ಇಂದು ನಿನ್ನ ನೋಡಲು ಹೊರಟಿದೆ. ಕುರುಡನ ಕೈಗೋಲಿನಂತಿರುವ ನನ್ನ ಕಂದನಿಂದು ನನ್ನನ್ನು ಬಿಟ್ಟು ನಿನ್ನನ್ನು ಅರಸಲು ಹೊರಟಿದ್ದಾನೆ. ವಿಶ್ವವ್ಯಾಪಿ, ಚರಾಚರ ನಾಯಕನಾದ ಪ್ರಭುವೇ ಈ ಮಗುವನ್ನು ಸಂರಕ್ಷಿಸುವ ಭಾರ ನಿನ್ನದಾಗಿದೆ. ಅಷ್ಟದಿಕ್ಪಾಲಕರೇ, ಅಕ್ಕಾ ವನದೇವಿಯೇ ನನ್ನ ಈ ಮಗುವನ್ನು ನೀವೇ ರಕ್ಷಿಸಿರಿ.

ಧ್ರುವ— ಅಮ್ಮಾ ನಾನಿನ್ನು ಬರಲೇ! ನೀನು ಯಾವುದಕ್ಕೂ ವ್ಯಥೆಪಡಬೇಡ. ದೇವರು ನನಗೆ ಖಂಡಿತ ಕಾಣಸಿಗುವನು. ಅವನಿಗೆ ಭಕ್ತರೆಂದರೆ ತುಂಬಾ ಪ್ರೀತಿ ಎಂದು ನೀನು ಹೇಳುತಿದ್ದಿಯಲ್ಲಾ. ನೀನು ಉಪಮನ್ಯುವಿನ ಕತೆ ಹೇಳುತಿದ್ದಿಯಲ್ಲವಮ್ಮಾ! ಬ್ರಾಹ್ಮಣ ಕುಮಾರನಾದ ಉಪಮನ್ಯು ಒಂದಿಷ್ಟು ದನದ ಹಾಲು ಬೇಡಿದುದಕ್ಕೆ ಶ್ರೀಮನ್ನಾರಾಯಣನು ಅವನಿಗೆ ಹಾಲಿನ ಸಮುದ್ರವನ್ನೇ ಕೊಟ್ಟಿದ್ದನಂತಲ್ಲವೇ? ನಾನೇನೂ ವಸ್ತುಗಳನ್ನು ಬೇಡಲು ಹೋಗುವುದಿಲ್ಲ. ಕೇವಲ ಅಪ್ಪಯ್ಯನ ತೊಡೆ ಮೇಲೆ ಕುಳಿತುಕೊಳ್ಳಬೇಕು. ಅದನ್ನು ಒಂದಿಷ್ಟು ನಡೆಸಿಕೊಡು ಎಂದು ಕೇಳುತ್ತೇನೆ. ಆದರಲ್ಲಿ ಯಾರಿಗೂ ಕಷ್ಟವಿಲ್ಲ ನೋಡು. ಬರುತ್ತೇನಮ್ಮಾ

ಬೇಸರಿಸದೇ ಸಂತೋಷದಿಂದ ನನ್ನನ್ನು ಬೀಳ್ಕೊಡು. ಬೇಗನೇ ಮರಳು ವಂತೆ ಆಶೀರ್ವದಿಸು.

ಸುನೀತಿ — ಕಂದಾ! ನಿನ್ನ ನಿಶ್ಚಯುವು ಧೃಡವಾಗಲಿ, ನಿನ್ನ ಮನಸ್ಸು ಏಕಾಗ್ರತೆಯಿಂದಿರಲಿ, ನಿನ್ನ ತಪಸ್ಸು ಪರಮಾತ್ಮನ ಭೇಟಿಗಾಗಿ ರಲಿ, ಹೋಗು ಕಂದಾ ನಿಶ್ಚಯಿಸಿದುದನ್ನು ಪಡೆದು ಬೇಗನೇ ಮರಳು.

(ಧ್ರುವ ತಾಯಿಯನ್ನು ನಮಸ್ಕರಿಸಿ, ದೇವರಿಗೆ ಕೈಮುಗಿಯುತ್ತಾನೆ. ತೆರೆ ಬೀಳುತ್ತದೆ)

ಐದನೇ ದೃಶ್ಯ.

(ಕೈಯಲ್ಲಿ ತಂಬೂರಿಯನ್ನು ಹಿಡಿದು ಪರಮಾತ್ಮನ ನಾಮಸ್ಮರಣೆ ಮಾಡುತ್ತ ನಾರದರ ಪ್ರವೇಶ. ವನ.)

ನಾರದ — ನಾರಾಯಣ- ನಾರಾಯಣ- ಎಂತಹ ಪರಮಾನಂದ ವಿದು. ನಾನು ಸ್ವರ್ಗ ಮೃತ್ಯ ಪಾತಾಳವನ್ನು ಸಂದರ್ಶಿಸಿದ್ದೇನೆ. ಅಲ್ಲಿಯ ಮಹಾ ಮಹಾ ವೈಭವಗಳನ್ನು ನೋಡಿದ್ದೇನೆ. ಆದರೆ ಪರಮಾತ್ಮನ ನಾಮ ಸ್ಮರಣೆಯಿಂದ ಸಿಗುವಂತಹ ಸುಖ- ಆನಂದ- ತೃಪ್ತಿ ಯಾವ ಲೋಕ ದಲ್ಲಿಯೂ ಕಂಡಿಲ್ಲ. ಸಾಕ್ಷಾತ್ ಶ್ರೀಮನ್ನಾರಾಯಣನು ವಾಸಿಸುವ ಲೋಕ ದಲ್ಲಿ ಕೂಡಾ ಇಂತಹ ಸುಖ - ಆನಂದ ತೃಪ್ತಿ ಇರಲಿಕ್ಕಿಲ್ಲ ಅಲ್ಲದೆ ಕಲಿ ಯುಗದಲ್ಲಿ ಮುಕ್ತಿಸಾಧನೆಗೆ ಇದಕ್ಕಿಂತ ಸುಲಭದ ಸಾಧನ ಬೇರೊಂದಿಲ್ಲ. ನಾರಾಯಣ! ನಾರಾಯಣ! ಇಂದೇಕೋ ನನ್ನ ಬಲಕಣ್ಣು ಹಾರುತ್ತಲಿದೆ ಯಲ್ಲ! ಇಂದು ನನ್ನಿಂದ ಯಾವುದೋ ಶುಭ ಕಾರ್ಯ ಜರಗಲಿಕ್ಕೆ ಸಾಕು. ನಾರದರೇ, ಅವರು ತಲೆ ತಲೆಗೆ ಗಂಟು ಹಾಕುವವರು; ಅವರೇ ಚಾಡಿ ಖೋರರು ಎಂದು ಎಲ್ಲಾ ಲೋಕಗಳ ಜನರ ನಿಂದೆಗೆ ನಾನು ಪಾತ್ರನು. ಅಯ್ಯೋ! ಬ್ರಹ್ಮಚಾರಿಯಾದ ನನಗಾವುದೂ ಬೇಡ. ಒಂದು ವೀಣೆ ಇದ್ದರೆ ಸರಿ. ಇದನ್ನು ಹಿಡಕೊಂಡು ನಾನು ಎಲ್ಲಿಯೂ ಹೋಗಬಲ್ಲೆ ನಾನು ಮಾಡುವುದೆಲ್ಲಾ ಜಗತ್ತಿನ ಕಲ್ಯಾಣಕ್ಕಾಗಿ, ಜನರ ಸುಖಕ್ಕಾಗಿ ಅದೆಷ್ಟೊ ಶುಭ ಕಾರ್ಯಗಳನ್ನು ಜರಗುವಂತೆ ಮಾಡಿದ್ದೇನೆ. ಆದರೆ ಇಂದು ನನ್ನ ಮನಸ್ಸಿಗೆ ಆದ ಇಷ್ಟೊಂದು ಉಲ್ಲಾಸ— ತೃಪ್ತಿ ಹಿಂದೆಂದೂ ಆಗಿರಲಿಲ್ಲ.

ಇದರ ಕಾರಣವೇನು? ಈ ಹೊತ್ತು ನನ್ನಿಂದ ಅದಾವುದೊ ಜಗತ್ ಕಲ್ಯಾಣದ ಕಾರ್ಯ ಜರಗಲಿಕ್ಕೆ ಸಾಕು. ಆದರೆ ವನ್ಯ ಮೃಗಗಳಿಂದ ತುಂಬಿದ ಈ ಕಾಡಿನಲ್ಲಿ ಜರಗಲಿರುವ ಶುಭ ಕಾರ್ಯವಾವುದು? ಆಹಹ (ನಗುವನು) ಅಂದು ವಾಲ್ಮೀಕಿ ಇಂತಹ ಘೋರ ಅರಣ್ಯದಲ್ಲೇ ಸಿಕ್ಕಿದನಲ್ಲವೇ? ''ರಾಮ'' ಎಂಬ ಒಂದೇ ಒಂದು ಮಂತ್ರದಿಂದ ಅವನು ರಾಮಾಯಣ ಮಹಾ ಕಾವ್ಯ ಬರೆಯುವಂತಾಗಲಿಲ್ಲವೇ? ಓರ್ವ ಸಾಮಾನ್ಯ ವ್ಯಾಧನು ಮಹಾ ಋಷಿ ಯಾಗುವನೆಂದು ಯಾರು ಬಗೆದಿದ್ದರು? (ಆಲಿಸುವನು) ಇದೇನು ಈ ಘೋರಾರಣ್ಯದಲ್ಲಿ ಮಧುರವಾದ ಕಂಠದಲ್ಲಿ ಆರೋ ಹಾಡುತ್ತಲಿದ್ದಂತೆ ತೋರುತ್ತದೆ. ವನದೇವತೆಯೋ- ಜಲದೇವತೆಯೋ- ಅಪ್ಸರೆಯೋ- ನಾಗ ಕನ್ಯೆಯೋ? ಯಾರಾಗಿರಬಹುದು? (ನಗುವನು) ಯಾರೇ ಆಗಲಿ (ಆಲಿಸಿ) ಅಲ್ಲ ಇದು ಗಂಡಸಿನ ಧ್ವನಿಯಲ್ಲ; ಇದು ಖಂಡಿತ ಹೆಂಗಸಿನ ಧ್ವನಿ ಆಹಾ! ಎಂತಹ ಭಾವವಿದು. ಯಾರನ್ನೋ ಕರೆಯುವಂತಿದೆ. ಯಾರನ್ನೋ ವಿನಂತಿಸು ವಂತಿದೆ. ಯಾರನ್ನೋ ಅನುನಯ ವಿನಯದಿಂದ ಬೇಡಿಕೊಳ್ಳುವಂತಿದೆ. ಆಹಾ! ಈ ಕರೆಗೆ ಓ ಕೊಡಬೇಕು ಎನ್ನುವಷ್ಟು ಭಾವಪೂರಿತವಾಗಿದೆ ಆ ಕೂಗು! ಹೃದಯವನ್ನು ಧ್ವನಿಯಲ್ಲಿ ಎರಕಹೊಯ್ದು ಕೇಳುವವನ ಕಿವಿ ಮೂಲಕ ಹೃದಯವನ್ನು ಪ್ರವೇಶಿಸುವಂತಿದೆ. ಇಲ್ಲೇ ಮರೆಯಲ್ಲಿ ನಿಂತು ಯಾರೆಂದು ನೋಡುವೆನು. (ಮರೆಯಾಗುವನು)

[ಪರಮಾತ್ಮನ ಗುಣಗಾನಮಾಡುತ್ತಾ, ಅವನನ್ನು ಕರೆಯುತ್ತಾ ಧ್ರುವ ಕುಮಾರನ ಪ್ರವೇಶ.]

ಧ್ರುವ— (ಸ್ವಗತ) ಅಮ್ಮ ಹೇಳಿದ್ದಳು, ಅರಣ್ಯದಲ್ಲಿ ಕಲ್ಲು ಮುಳ್ಳು ಗಳಿವೆ. ಕಾಡುಮೃಗಗಳಿವೆ. ಹೋಗಲು ಹಾದಿಯಿಲ್ಲ. ಉಣಲು ಊಟವಿಲ್ಲ. ಬಾ ಎಂದು ಕರೆವರಿಲ್ಲ ಎಂದು. ಆದರೆ ನನಗೆ ಅಲ್ಲಿ—ಇಲ್ಲಿ ಯಾವ ವ್ಯತ್ಯಾಸವೂ ಕಾಣುವುದಿಲ್ಲವಲ್ಲ! ಅಮ್ಮನೊಡನಿದ್ದಷ್ಟೆ ತೃಪ್ತಿ ನನ್ನಲ್ಲಿ ಇಂದು ಇದೆ. ಸರಿ ಇದು ಅಮ್ಮನ ಆಶೀರ್ವಾದದ ಫಲ. ಇಲ್ಲಿತನಕ ಬಂದೆ. ಬರುತ್ತಾ ಅವನನ್ನು ಕರೆದೆ— ಬರಲಿಲ್ಲ. ಅವನಲ್ಲಿಯೇ ಮನಸ್ಸಿಡಬೇಕು ಎಂದು ಅಮ್ಮ ಹೇಳಿದ್ದಾಳೆ. ಬರುತ್ತಾ ಬರುತ್ತಾ ಅವನನ್ನೇ ಸ್ಮರಿಸಿದ್ದೇನೆ. ಆಗ ಮನಸ್ಸು ಹಾದಿಯತ್ತಕಡೆ ಸ್ವಲ್ಪ ಗಮನಕೊಡುತ್ತಿರಬೇಕು. ಇನ್ನು ಒಂದೆಡೆ ಕುಳಿತು

ಕೊಂಡು ಅವನನ್ನು ನೆನಸಬೇಕಾಗಿದೆ. ಇದುವೇ ಯೋಗ್ಯವಾದ ಸ್ಥಳವೆಂದು ಕಾಣುತ್ತದೆ. ಇಲ್ಲೇ ಮರದಡಿಯಲ್ಲಿ ಕುಳಿತು ಅವನನ್ನು ಕರೆಯುತ್ತೇನೆ.

ನಾರದ— (ಸ್ವಗತ) ಆಹಾ ಎಂತಹ ರೂಪ, ಎಂತಹ ಘನತೆ, ಮಗು ಆರ ವಿಷಯವಾಗಿ ಮಾತನಾಡುತ್ತಿರಬಹುದೆಂದು ತಿಳಿದೆ. ಇಷ್ಟು ಸಣ್ಣ ಪ್ರಾಯದ ಮಗು ಕಾಡಿನಲ್ಲಿ ಬಂದು ಯಾರ ಕುರಿತು ಚಿಂತನೆಮಾಡಲು ಹವಣಿಸುತ್ತಿರಬೇಕು? ಎಂದು ಕೇಳಬೇಕಾಗಿದೆ. ನಾನಾಗಿ ಮುಂದೆಹೋಗಿ ಸ್ಪಷ್ಟವಾಗಿ ಕೇಳುವುದೇ ಉಚಿತ. ಜ್ಞಾನದೃಷ್ಟಿಯಿಂದ ನಾನೆಲ್ಲವನ್ನೂ ತಿಳಿದೆನಾದರೂ ಮಗುವನ್ನು ಪರೀಕ್ಷಿಸಬೇಕಾಗಿದೆ.

ನಾರದ — ನಾರಾಯಣ—ನಾರಾಯಣ. ಯಾರಪ್ಪಾ ನೀನು?

ಧ್ರುವ— ನಾನು ಉತ್ತಾನಪಾದ ಮಹಾರಾಜರ ಪುತ್ರ. ಧ್ರುವ ಕುಮಾರ ಎಂದು ನನ್ನನ್ನು ಕರೆಯುತ್ತಾರೆ. ತಾವಾರೆಂದು ತಿಳಿಯಬಹುದೇ?

ನಾರದ— ಓಹೋ ಅವಶ್ಯವಾಗಿ. ನನ್ನನ್ನು ನಾರದನೆಂದು ಕರೆಯುತ್ತಾರೆ. ತಿಳಿಯಿತೇ? ಎಲ್ಲಿಯಾದರೂ ನನ್ನ ಹೆಸರನ್ನು ಕೇಳಿದ್ದಿಯಾ ಮಗು?

ಧ್ರುವ— ಮಹಾತ್ಮರ ಚರಣಗಳಿಗೆ ನಮಸ್ಕರಿಸುತ್ತೇನೆ (ನಮಸ್ಕರಿಸುತ್ತಾನೆ) ನನ್ನ ತಾಯಿಯಿಂದ ನಾನು ತಮ್ಮ ಮಹಿಮೆಯನ್ನು ಕೇಳಿ ಬಲ್ಲೆ. ಇಂದು ನಿಮ್ಮ ದರ್ಶನದಿಂದ ಧನ್ಯನಾದೆ.

ನಾರದ— ದೀರ್ಘಾಯುಷ್ಯನಾಗಿ, ಖ್ಯಾತಿವಂತನಾಗಿ ಬಾಳು. ನಾರಾಯಣ—ನಾರಾಯಣ—ಆದಿರಲಿ, ಅರಸು ಮಗನಾದ ನೀನು ಈ ಘೋರಾರಣ್ಯಕ್ಕೆ ಬಂದುದೇಕೆ? ನೀನು ಯಾರ ವಿಷಯವಾಗಿ ಮಾತನಾಡುತ್ತಲಿದ್ದೆ. ಯಾರನ್ನು ಕುರಿತು ನೀನು ಅಷ್ಟು ತನ್ಮಯನಾಗಿ ಹಾಡುತ್ತಿದ್ದಿ?

ಧ್ರುವ— ನಾನು ಪರಮಾತ್ಮನನ್ನು ಕಾಣಲು ಈ ಅರಣ್ಯಕ್ಕೆ ಬಂದಿರುವವನಾಗಿರುತ್ತೇನೆ.

ನಾರದ— ಏನು? ಪರಮಾತ್ಮನನ್ನು ಕಾಣಲು ಅರಣ್ಯಕ್ಕೆ ಬಂದಿರುವೆ ಅನ್ನುತ್ತಿಯಾ? ಪರಮಾತ್ಮನನ್ನು ಕಾಣಲು ಅಷ್ಟು ಆತುರವೇಕೆ? ನಿನಗೆ

ಬಂದಂಥಾ ವಿಪತ್ತಾವುದು? ಹಾಲಹಲ್ಲು ಬೀಳದ ಮೊನ್ನಿನ ಮಗು ನೀನು. ಸಂಸಾರವೇನೆಂದು ಅರಿಯದ ಹಾಲಹಸುಳೆ ನೀನು! ಪರಮಾತ್ಮನು ದಟ್ಟಡವಿ ಯಲ್ಲಿರುವನೆಂದು ಯಾರು ಹೇಳಿದರು ನಿನಗೆ?

ಧ್ರುವ— ಪರಮಾತ್ಮನು ಎಲ್ಲೆಲ್ಲಿಯೂ ಇರುವನೆಂದು ನಾನು ತಿಳಿದಿರುತ್ತೇನೆ ಮುನಿಗಳೇ. ಆದರೆ, ಆದರೆ......

ನಾರದ— ಆದರೇನು? ಅವನಿಂದ ಏನಾದರೂ ಕಾಡಿ ಬೇಡಿ ಪಡೆಯುವ ಇಚ್ಛೆಯಿದ್ದು ಬಂದಿಲ್ಲವಷ್ಟೆ!

ಧ್ರುವ— ತ್ರಿಕಾಲಜ್ಞಾನಿಗಳೆಂದು ಅಮ್ಮ ಹೇಳುತಿದ್ದಳು. ಆದರೂ ತಾವು ನನ್ನ ಬಾಯಿಯಿಂದಲೇ ಅದನ್ನು ಕೇಳಬೇಕೆಂದು ಪ್ರಶ್ನಿಸುತ್ತಲಿದ್ದಂತೆ ಕಾಣುತ್ತದೆ. ಮುನಿಗಳೇ—ನಾನು, ನಾನು... ...

ನಾರದ— ನಾನು ಮುಂದುವರಿಸು ಧ್ರುವಕುಮಾರ; ಅಳುಕಬೇಡ-

ಧ್ರುವ— ನಾನು ಅಪ್ಪನ ತೊಡೆಯಮೇಲೆ ಕುಳಿತುಕೊಳ್ಳುವಂತೆ ಆಗಬೇಕೆಂದು ದೇವರೊಡನೆ ಬೇಡಲು ಬಂದಿದ್ದೇನೆ.

ನಾರದ— (ನಗುತ್ತಾ) ಅಪ್ಪನ ತೊಡೆಯಮೇಲೆ ಕುಳಿತುಕೊಳ್ಳಲು ದೇವರೊಡನೆ ಕೇಳಬೇಕೆ? ಹೋದರಾಯಿತು, ಅಪ್ಪನ ತೊಡೆಯಮೇಲೆ ಕುಳಿತುಕೊಂಡರಾಯಿತು. ಅಲ್ಲದೆ ಹಾಗೆಲ್ಲ ಪರಮಾತ್ಮನು ನಿನಗೆ ನೋಡಸಿಗುವನೇನು?

ಧ್ರುವ— ನಿಜಕ್ಕೂ ನೋಡಸಿಗುವನು ಮುನಿಗಳೇ! ಅಮ್ಮ ಹೇಳಿರುವಳು.

ನಾರದ— ಅಮ್ಮ ಏನು ಹೇಳಿರುವಳು—ಪರಮಾತ್ಮನನ್ನು ಕಾಣಲು ಗುರುವಿನ ಆವಶ್ಯಕತೆಯಿದೆ. ಗುರುಮಂತ್ರದಿಂದಲೇ ಅವನನ್ನು ಧ್ಯಾನಿಸಬೇಕಾಗಿದೆ. ನಿನಗೆ ಗುರುಗಳು ಗುರುಮಂತ್ರ ಉಪದೇಶಿಸಿದ್ದಾರೆಯೇ ಧ್ರುವಕುಮಾರ?

ಧ್ರುವ— ಪರಮಾತ್ಮನನ್ನು ಕಾಣಲು ಗುರುಗಳು, ಗುರುಮಂತ್ರ ಬೇಕೆ? ನೀವು ಹೇಳುವುದರಿಂದ ನಂಬಬೇಕಾದ ಮಾತು ಅಷ್ಟೆ! ಅದೆಲ್ಲ ನಾನರಿಯೆ.

ನಾರದ— ನೀನು ಅರಿತುದನ್ನು ಹೇಳು ಮಗು! ನೀನು ದೇವರನ್ನು ಕಾಣಲು ಯಾವ ಸಾಧನವನ್ನು ಉಪಯೋಗಿಸುವಿ? ಜಪವೇ, ತಪವೇ, ಧ್ಯಾನವೇ—ಆಸನವೇ—ನಿರಾಹಾರವೇ ಯಾವುದು?

ಧ್ರುವ— ಜಪವೂ ನಾನರಿಯೆ, ತಪವೂ ನಾನರಿಯೆ. (ಸ್ವಲ್ಪ ಸಂಶಯಗೊಂಡವನಂತೆ) ಅವೆಲ್ಲವೂ ಬೇಕೆ? ಅದಿಲ್ಲದೇ ದೇವರು ಸಿಗ ಲಾರನೇ ಮುನಿಗಳೇ?

ನಾರದ— (ಸ್ವಗತ) ಸರಿ ತಾಗಿತು ನಿನ್ನ ಬಾಣ. ಇಂತಹ ಹಾಲ ಹಸುಳೆಯನ್ನು ಘೋರಾರಣ್ಯಕ್ಕೆ ಅಟ್ಟಿದ ತಾಯಿ, ತಂದೆಯರು ಮನುಷ್ಯ ಮಾತ್ರರಲ್ಲ ಎಂಬುದಕ್ಕೆ ಸಂಶಯವೇ ಬೇಡ. ಹೇಗಾದರೂ ಮಾಡಿ ಈ ಮಗುವನ್ನು ಪಟ್ಟಣಕ್ಕೆ ಕಳುಹಿಸಲೇಬೇಕು. ಇಷ್ಟರವರೆಗೆ ಈ ಘೋರ ಆರಣ್ಯದಲ್ಲಿ ಈ ಮಗು ಬದುಕಿದುದೇ ಪೂರ್ವಪುಣ್ಯ. (ಪ್ರಕಟವಾಗಿ) ದೇವರು ಅಷ್ಟು ಸುಲಭದಲ್ಲಿ ಸಿಕ್ಕುವನೆಂದಾದರೆ ಮತ್ತೇನು ಉಳಿಯಿತು ಈ ಲೋಕದಲ್ಲಿ? ಆಗ ಎಲ್ಲಾ ಲೋಕಗಳೂ ಸಮಾನವಾದವಲ್ಲಾ ಮಗು? ಆದುದರಿಂದ ದೇವರನ್ನು ಕಾಣಲು ತುಂಬಾ ಕಷ್ಟವಿದೆ. ನೀನು ಪಟ್ಟಣಕ್ಕೆ ಹೋಗಿ ತಾಯಿ ತಂದೆಯರೊಡನೆ ಸುಖವಾಗಿದ್ದುಕೊಂಡು ಬೆಳೆದು ದೊಡ್ಡವ ನಾಗಿ ರಾಜ್ಯವನ್ನಾಳಿ, ಮುದಿತನ ಬಂದಾಗ ಮತ್ತೆ ಬಂದು ತಪಸ್ಸನ್ನಾಚರಿಸಿ ದೇವರನ್ನು ಕಾಣುವಿಯಂತೆ. ಈಗ ಅಪ್ಪಯ್ಯನ ತೊಡೆಮೇಲೆ ನಾನೇ ಬೇಕಾದರೆ ಬಂದು ಕುಳಿತುಕೊಳ್ಳುವಿಸುವೆನಲ್ಲ!

ಧ್ರುವ— ದೇವರನ್ನು ಕಾಣುವುದು ಸುಲಭವಿರಲಿ, ಕಷ್ಟವಿರಲಿ ಆ ಮಾತಿಲ್ಲ. ಒಮ್ಮೆ ಬಂದವ ನಾನು ದೇವರನ್ನು ನೋಡದೆ ಹಿಂದಿರುಗ ಲಿಕ್ಕಿಲ್ಲ.

ನಾರದ— (ಸ್ವಗತ) ಇದುವೇ ದೃಢನಿಶ್ಚಯ. ಯಾವುದಕ್ಕೂ ಇದು ಮೊದಲು ಬೇಕು. ಶಾಭಾಸ್ ಇದು ಬೇಕಾದಷ್ಟು ಇದೆ. (ಪ್ರಕಟವಾಗಿ)

ದೇವರು ನಿನಗೆ ನೋಡಸಿಗುವನೇ? ಈ ಮುಂಚೆ ಯಾರಾದರೂ ನಿನ್ನ ವಯಸ್ಸಿನಲ್ಲಿ ದೇವರನ್ನು ಕಂಡುದಿದೆಯೋ?

ಧ್ರುವ— ಇಲ್ಲವೇ ಮತ್ತೆ? ಪ್ರಹ್ಲಾದ ಕಂಡಿಲ್ಲವೇ? ಬ್ರಾಹ್ಮಣ ಪುತ್ರನಾದ ಉಪಮನ್ಯುವಿಗೆ ಶ್ರೀಮನ್ನಾರಾಯಣನು ಪ್ರಸನ್ನನಾಗಿ ಹಾಲು ಬೇಡಿದ್ದಕ್ಕೆ ಕ್ಷೀರಸಮುದ್ರವನ್ನೇ ಕೊಡಲಿಲ್ಲವೇ? ಅವರಿಗೆ ಇಷ್ಟೆಲ್ಲಾ ಕೊಟ್ಟ ಪರಮಾತ್ಮನು ನನಗೆ ಅಪ್ಪಯ್ಯನ ತೊಡೆಮೇಲೆ ಕುಳಿತುಕೊಳ್ಳಲು ಒಪ್ಪಿಗೆ ಕೊಡಲಾರನೇ? ಕೊಟ್ಟೇಕೊಡುವನು. ಒಂದೇ ಸವನೆ ಮನಸ್ಸಿಟ್ಟು ಅವನನ್ನು ಕರೆದರೆ ಪರಮಾತ್ಮನು ಬರಲಾರನೆ ನಾರದಮುನಿಗಳೇ? ಬಂದೇ ಬರುವನು. ಅವನು ಅಷ್ಟು ನಿಷ್ಠುರನಾಗಿರಲಿಕ್ಕಿಲ್ಲ. ಇದರಲ್ಲಿ ಸಂಶಯವಿಲ್ಲ.

ನಾರದ— (ಸ್ವಗತ) ಮೆಚ್ಚತಕ್ಕ ಮಾತು. ಮನಸ್ಸನ್ನು ಏಕಾಗ್ರತೆಯಿಂದಿಡಲು ಪ್ರಯಾಸವಾಗಲಾರದು; ಈಗಲೇ ಅದು ಏಕಾಗ್ರತೆಯಲ್ಲೇ ಇದೆ. ಮಗುವಿನ ಮುಖ ಹಾಗೂ ಕಣ್ಣುಗಳು ಅದನ್ನು ಸೂಚಿಸುತ್ತಲಿವೆ. (ಪ್ರಕಟವಾಗಿ) ನೀನು ದೇವರನ್ನು ಕಾಣದೆ ಹೋಗಲಾರೆ. ದೇವರನ್ನು ಒಂದೇ ಮನಸ್ಸಿನಿಂದ ಕರೆಯುತ್ತಿ ಸರಿ. ಊಟಉಪಚಾರಗಳ ಗತಿಯೇನು? ಉಳಕೊಳ್ಳುವಿ ಎಲ್ಲಿ? ಎಲ್ಲವನ್ನು ಕೇಳಬೇಕೆಂಬ ಆತುರ ನನ್ನಲ್ಲಿ ಹೆಚ್ಚುತ್ತಿದೆ.

ಧ್ರುವ— ದೇವರನ್ನು ನೆನೆದರೆ ಹಸಿವಾಗುತ್ತದೆಯೇ? ಅಮ್ಮನನ್ನು ಬಿಟ್ಟಂದಿನಿಂದ ನನಗೆ ಹೆಚ್ಚು ಹಸಿವಾಗಲೇ ಇಲ್ಲವಲ್ಲ. ಉಳಕೊಳ್ಳಲು ಮನೆ ಇದ್ದರೇನೆ ದೇವರ ಧ್ಯಾನಕ್ಕೆ ತೊಂದರೆ. ಹೀಗಾಗಿ ಇದೇ ಮರದ ಕೆಳಗೆ ಹೀಗೆ ಕೂತುಕೊಂಡು (ಪದ್ಮಾಸನ ಹಾಕಿ ತೋರಿಸುತ್ತಾನೆ) ಅವನನ್ನು ಕರೆಯುತ್ತೇನೆ (ಎದ್ದುಕೊಂಡು ಬಂದು) ಮುನಿಗಳೇ ನಾನು ದೇವರನ್ನು ಕರೆಯಲು ಕೂತುಕೊಳ್ಳುವ ಮುಂಚೆ ನನ್ನನ್ನೊಮ್ಮೆ ಹರಸಿರಿ. (ಮುನಿಗಳ ಕಾಲುಮುಟ್ಟಿ ನಮಸ್ಕರಿಸುವನು.)

ನಾರದ— (ತುಂಬಿ ಬಂದ ಕಂಠದಿಂದ) ಏಳು, ಕಂದಾ ಏಳು. ನಿನ್ನಿಂದ ದೇವರು ದೂರವಿಲ್ಲ. ನಿನ್ನ ಬಳಿಯೇ ನಿನ್ನಲ್ಲಿಯೇ ಇದ್ದಾನೆ. ನಿನ್ನ

ಮತ್ತು ಅವನ ನಡುವೆ ನಾನು ನಿಲ್ಲಲು ಇಚ್ಛಿಪಡುವುದಿಲ್ಲ. ಧ್ರುವಕುಮಾರ ಕಂದಾ! ಇಲ್ಲಿ ಬಾ. ಪರಮಾತ್ಮನನ್ನು ಅರಿತುಕೊಳ್ಳಬೇಕಾದರೆ ಗುರುವಿನ ಅವಶ್ಯಕತೆಯಿದೆ ಎಂದೂ ಗುರುಮಂತ್ರವೇ ಪರಮಾತ್ಮನನ್ನು ಕಾಣುವ ಸುಲಭಸಾಧನವೆಂದೂ ಹೇಳಲ್ಪಟ್ಟಿದೆ. ಭಕ್ತರ ಉದ್ಧಾರಕ್ಕಾಗಿ ಜನ್ಮವೆತ್ತಿದ ಪರಮಾತ್ಮನು ಕೂಡ ರಾಮ, ಕೃಷ್ಣ ಇತ್ಯಾದಿ ಅವತಾರಗಳಲ್ಲಿ ವಶಿಷ್ಠ, ಸಾಂದಿಪನ ಋಷಿಗಳಿಂದ ಗುರುಮಂತ್ರ ಪಡೆದಿದ್ದಾರೆ.

ಧ್ರುವ— ಮುನಿಗಳೇ ನನಗೂ ಗುರುಮಂತ್ರ ಹೇಳಿಕೊಟ್ಟು ಪುನೀತ ನನ್ನಾಗಿ ಮಾಡುವಿರಾ?

ನಾರದ— ಆಹಾ! ಎಂತಹ ಸಂಭ್ರಮದ ದಿನ, ಎಂತಹ ಸಂಭ್ರಮದ ಸಮಯ. ಬಾ ಮಗು ಇಲ್ಲಿ ಕುಳಿತುಕೊ. ಆಗ ಹಾಕಿದಂತೆ ಆಸನ ಹಾಕು. ನಾನು ನಿನ್ನ ಕಿವಿಯಲ್ಲಿ ಒಂದು ಮಂತ್ರ ಹೇಳುವೆನು. ಅದನ್ನು ಒಂದೇ ಮನಸ್ಸಿನಿಂದ ನೀನು ಯಾವನ ಹೆಸರು ಪಠಿಸುತ್ತೀಯೋ ಅದೇ ರೂಪವನ್ನು ಮನಸ್ಸಿನಲ್ಲಿ ನೆನೆದು ಬಾರಿ ಬಾರಿಗೂ ಹೇಳು. (ಕಿವಿಯಲ್ಲಿ ಮಂತ್ರಹೇಳುವರು.)

ನಾರದ— ಹೇಳು ಮಗು. ಪುನರುಚ್ಚಾರಮಾಡು.

ಧ್ರುವ— ಓಂ ನಮೋಃ ನಾರಾಯಣಾಯ ನಮಃ, ಓಂ ನಮೋಃ ನಾರಾಯಣಾಯ ನಮಃ

ನಾರದ— ಸ್ವಲ್ಪ ನಿಧಾನವಾಗಿ ಹೇಳು ಸರಿ.

(ಧ್ರುವ ಕಣ್ಣು ಮುಚ್ಚಿ ಧ್ಯಾನಾಸಕ್ತನಾಗುವನು. ಹೇಳುವ ಮಂತ್ರವು ಮೆಲ್ಲ ಮೆಲ್ಲವಾಗುವುದು. ಸ್ವರವು ಶಾಂತವಾಗುವುದು.)

ನಾರದ— ಎಲ್ಲವೂ ಅಣಿಯಾಗಿತ್ತು ದೃಢ ನಿಶ್ಚಯ, ಅಚಲ ಮನಸ್ಸು, ಪರಮಾತ್ಮನನ್ನು ಕಾಣುವ ಆತುರ, ಎಲ್ಲವೂ ಕೂಡಿ ಪರಿಪಕ್ವವಾಗಿತ್ತು. ನಾನು ಕೇವಲ ನಾಮಮಾತ್ರಕ್ಕೆ ಕಾರಣನು. ಇನ್ನು ಇಲ್ಲಿರುವುದು ಉಚಿತವಲ್ಲ. ದೇವ—ಭಕ್ತರು ಅನನ್ಯವಾಗಿ ಸೇರಿಕೊಳ್ಳಲಿ. ನನ್ನ ಇರುವಿಕೆ ಇಲ್ಲಿಗಿಂತ ಸುನೀತಿಯ ಬಳಿ ಅವಶ್ಯವಿದೆ. ಅಲ್ಲಿಂದ ಉತ್ತಾನ

ಪಾದನನ್ನು ಕಂಡು ಅವನನ್ನು ತಿಳುವಳಿಕೆಯು ಹಾದಿಗೆ ತರಬೇಕಾಗಿದೆ. ಮಗುವನ್ನು ವೈಭವದಿಂದ ಪಟ್ಟಣಕ್ಕೆ ಕೊಂಡೊಯ್ಯಬೇಕಾಗಿದೆ. (ಧ್ರುವನ ಕಡೆ ತಿರುಗಿ) ವತ್ಸಾ! ನಿನ್ನ ಉದ್ದೇಶ ಸಫಲವಾಗಲಿ. (ಹಾಡುತ್ತಾ ನಾರದರ ನಿರ್ಗಮನ.)

(ತೆರೆ ಬೀಳುವುದು.)

ಆರನೇ ದೃಶ್ಯ

(ಸ್ಥಳ— ಸುನೀತಿಯು ಮನೆ. ದೇವರ ಬಳಿ ದೀಪ ಉರಿಯುತ್ತಲಿದೆ. ಸುನೀತಿ ಯಾವುದೋ ಗ್ರಂಥವನ್ನು ಓದುತ್ತಲಿದ್ದಾಳೆ. ಪಹರೆಯುವ ಒಂದು ಬದಿಗೆ ಕುಳಿತು ಕೊಂಡಿದ್ದಾನೆ)

ಸುನೀತಿ— ಧ್ರುವಕುಮಾರ ವನಕ್ಕೆ ಹೊರಟು ಹೋಗಿ ಒಂದೆರಡು ವಾರಗಳು ಕಳೆದು ಹೋದವು ಎರಡು ವಾರಗಳು ಎರಡು ವರ್ಷಗಳಂತೆ, ದೀರ್ಘವಾಗಿ ತೋರುತ್ತವೆ. ಇಂದು ನನ್ನ ಎಡಕಣ್ಣು ಹಾರುತ್ತಲಿದೆ. ಅದಾವುದೋ ಶುಭ ಸಂಗತಿ ಕೇಳಿ ಬರಲಿಕ್ಕೆ ಸಾಕು. ಬೆಳಗ್ಗಿನಿಂದ ಆಗಾಗ್ಯೆ ನನ್ನ ಮನಸ್ಸು ಪುಲಕಿತವಾಗುತ್ತಿದೆ. ಹೃದಯ ಉಲ್ಲಾಸದಿಂದ ಉಕ್ಕಿ ಬರುತ್ತಲಿದೆ. ಹುಟ್ಟಿದಂದಿನಿಂದ ಇಂತಹ ಅನುಭವವನ್ನು ನಾನು ಅನುಭವಿಸಿಲ್ಲ (ಪಹರೆಯುವ ಕುಳಿತಲ್ಲೇ ತೂಕಡಿಸುತ್ತಾನೆ. ಅನನಕಡೆ ತಿರುಗಿ) ಧ್ರುವಕುಮಾರ ಹೋದಂದಿನಿಂದ ದಾಮಣ್ಣ ಮನೆ ಬಾಗಿಲು ಕಾಯುತ್ತಲಿದ್ದಾನೆ. ಎಷ್ಟು ಹೋಗೆಂದರೂ ಅಂದಿನಿಂದ ತನ್ನ ಮನೆಯತ್ತ ಕಡೆ ಕೂಡಾ ಹೋಗದೆ ಇಲ್ಲೇ ಇದ್ದು ಬಿಟ್ಟಿದ್ದಾನೆ. ಪರಮಾತ್ಮಾ! ಇದು ಕೂಡಾ ನಿನ್ನ ಅನುಗ್ರಹ. ಯಾರಿಗೂ ಬೇಡವಾದ ನಾನು ನಿನಗೆ ಬೇಕಾದಂತೆ ತೋರುತ್ತದೆ. ಅದಕ್ಕಾಗಿ ದಾಮಣ್ಣನನ್ನು ನನ್ನ ಕಾವಲಿಗೆ ನೀನು ಇರಿಸಿದಂತಿದೆ. (ಆಲಿಸಿ) ಅದೇನು ಕೇಳಬರುತ್ತದೆ! ದಾಮಣ್ಣ!

ದಾಮಣ್ಣ— (ಎಚ್ಚತ್ತು) ದೇವಿಯವರೇ!

ಸುನೀತಿ— ಅದಾವುದೋ ಸ್ವರ್ಗೀಯ ಸಂಗೀತ ಕೇಳಿಸುತ್ತದೆಯೇ ..

ದಾಮಣ್ಣ— ನಿಜ ದೇವಿಯವರೇ!

ಸುನೀತಿ— ಮಹರ್ಷಿ ನಾರದರು ಇತ್ತಕಡೆ ಬರುವಂತಿದೆ. (ದೇವರನ್ನು ನಮಸ್ಕರಿಸಿ) ದೇವಾ! ಇದು ಕೂಡಾ ನಿನ್ನದೆ ಆಟ. ನಾರದ ಮಹರ್ಷಿಗಳು ಅನಾಥಳಾದ— ಎಲ್ಲರಿಂದಲೂ ಕಡೆಗಣಿಸಿದವಳಾದ ನನ್ನಲ್ಲಿ ಬರುವುದೆಂದರೆ ಬಡವನ ಮನೆಗೆ ಭಾಗೀರಥಿ ಬಂದಂತೆ. (ನಾಮಸ್ಮರಣೆ ಮಾಡುತ್ತ ನಾರದರ ಪ್ರವೇಶ.) (ಸುನೀತಿ ನಾರದರನ್ನು ನಮಸ್ಕರಿಸುವಳು.)

ನಾರದ— ಅಖಂಡ ಸೌಭಾಗ್ಯವತಿಯಾಗಿ ಬಾಳು. ಆದರ್ಶ ಮಾತೆ ಯೆಂದು ಚಿರಕಾಲ ನಿನ್ನ ಹೆಸರು ಕೀರ್ತಿಯಿಂದ ಬೆಳಗಲಿ.

ಸುನೀತಿ— ಎಲ್ಲವೂ ನಿಮ್ಮಂಥವರ ಆಶೀರ್ವಾದದ ಫಲ.

(ಸಹರಿಯುವ ನಮಸ್ಕರಿಸುವನು.)

ಸುನೀತಿ— ಮಹರ್ಷಿಗಳೇ, ಆದರ್ಶ ಮಾತೆ ಅಂದಿರಲ್ಲ. ನಿಜಕ್ಕೂ ಆದರ್ಶ ಮಾತೆ ಇಷ್ಟು ಸಣ್ಣಕಂದನ ಹಟವನ್ನು ಪ್ರೀತಿಯಿಂದ ಗೆಲ್ಲಲಾರದೆ ಅಡವಿಗೆ ಅಟ್ಟಿದ ಮಾತೆಯ ಹೆಸರು ಚಿರಕಾಲ ಬಾಳಿಯೇ ಬಾಳುವುದು; ಆದರೆ ಕೀರ್ತಿಯಿಂದಲ್ಲ, ಅಪಕೀರ್ತಿಯಿಂದ.

ನಾರದ— ಹಾಗೆ ಹೇಳಬೇಡ ಸುನೀತಿ. ನಿನ್ನಂತಹ ಪುಣ್ಯಶಾಲಿ ತಾಯಿ ಮೂರುಲೋಕದಲ್ಲಿಯೂ ನಾ ಕಾಣೆ. ಹಿಂದೆ ಹುಟ್ಟಿಲ್ಲ. ಮುಂದೆ ಹುಟ್ಟಿ ಲಿಕ್ಕಿಲ್ಲ. ಧ್ರುವನಂತಹ ಭಕ್ತನನ್ನು ಹಡೆದ ನೀನು ತ್ರಿಲೋಕಕ್ಕೂ ವಂದ್ಯಳು.

ಸುನೀತಿ— (ಕಣ್ಣುಗಳನ್ನು ಒರಸುತ್ತ) ಮುನಿಗಳೇ ಧ್ರುವಕುಮಾರ ಇಲ್ಲಿಂದ ಹೊರಟು ಹೋಗಿ ಎರಡು ವಾರಗಳು ಕಳೆದುವು. ಆದರೆ ಇಷ್ಟರ ವರೆಗೆ ಅವನು ಎಲ್ಲಿರುವನೆಂದು ತಿಳಿದಿಲ್ಲ.

ನಾರದ— ಅವನೆಲ್ಲಿರುವನೆಂದು ನಾನು ಬಲ್ಲೆ. ನಾನೇ ಅವನಿಗೆ ಗುರು ಮಂತ್ರವನ್ನು ಉಪದೇಶಿಸಿ ಬಂದ್ದಿದೇನೆ. ನಾನು ಅಲ್ಲಿಂದ ಹೊರಡುವ ಮುಂಚೆಯೇ ಅವನು ಧ್ಯಾನಾಸಕ್ತನಾಗಿದ್ದಾನೆ. ಈಗಾಗಲೇ ಅವನಿಗೆ ಪರ

ಮಾತ್ಮನ ಸಾಕ್ಷಾತ್ಕಾರವಾಗಿದೆ. ಆಹಾ! ಇಂತಹ ಸಣ್ಣ ವಯಸ್ಸಿನಲ್ಲಿ ಅಷ್ಟು ಸಣ್ಣ ಬಾಲಕನ ನಿಶ್ಚಯವನ್ನು ಕಂಡಲ್ಲಿ ಹೊತ್ತು, ಹೆತ್ತು, ಸಲಹಿದ ತಾಯಿಯಾದ ನೀನು ಅವನನ್ನು ಯಾವ ರೀತಿಯಲ್ಲಿ ಬೆಳೆಸಿದೆ ಎಂದು ತಿಳಿದು ಬರುತ್ತದೆ. ಮಗುವಿನ ಮನಸ್ಸು ಬೆಣ್ಣೆಯಂತೆ ಮೃದುವಾಗಿರುತ್ತದೆ. ಚಿಕ್ಕಂದಿನಲ್ಲಿಯೇ ಅದನ್ನು ರೂಪಕ್ಕೆ ತರಬೇಕು. ಅದನ್ನು ಸಾಕಷ್ಟು ತಿದ್ದಿದಿ.

ಸುನೀತಿ— ಮಹರ್ಷಿಗಳೆ ದೇವರ ಕುರಿತು ನಾನೇನು ಬಲ್ಲೆ! ಹೆಂಗುಸಾದ ನಾನು ವೇದ ಶಾಸ್ತ್ರ ಓದಿಲ್ಲ. ಸಾಧುಸಜ್ಜನರ ಸಂಗ ಮಾಡಿಲ್ಲ. ಅಲ್ಲದೆ .

ನಾರದ— ತಿಳಿದೆ ಸುನೀತಿ. ನೀನು ವೇದಶಾಸ್ತ್ರ ಓದಿಲ್ಲ—ಇದನ್ನು ಇಲ್ಲಿಯ ವಾತಾವರಣದಿಂದ ಕಂಡುಹಿಡಿದೆ. ಅರಸನ ಪಟ್ಟದ ಮಹಿಷಿಯಾದ ನೀನು, ಅರಸನು ಮನೆಯಿಂದ ಹೊರಡಿಸಿದರೂ ಇದ್ದುದರಲ್ಲಿ ತೃಪ್ತಿಯಿಂದ ಇದ್ದಿಯಲ್ಲ ನೀನು.

ಸುನೀತಿ— ಹೌದು ಮುನಿಗಳೇ.

ನಾರದ— ಸಾಕು, ತೃಪ್ತಿಯೇ ಜೀವನದ ಏಕಮಾತ್ರ ಉದ್ದೇಶ. ಇದ್ದ ಪರಿಸ್ಥಿತಿಯಲ್ಲಿ ತೃಪ್ತಿಯಿಂದ ಇರುವುದೇ ಪರಮಾತ್ಮನ ದಯೆ. ಅವನು ಅರಸನಾಗಲಿ ಬಿಕಾರಿಯಾಗಲಿ, ತೃಪ್ತಿಯಿಂದ ಇದ್ದವನ ಜೀವನದಲ್ಲಿ ಸ್ವರ್ಗಸುಖವನ್ನು ಕಾಣಬಹುದು. ಇವನನ್ನೇ ನೋಡು. (ಪಹರೆಯವನ ಕಡೆ ಹೊರಳಿ) ರಾಜದ್ವಾರ ಕಾಯುವವನು ನಿನ್ನ ಮನೆಯಲ್ಲಿ ಏಕೆ ಬಿದ್ದುಕೊಂಡಿದ್ದಾನೆ? ಯಾವ ಸುಖಕ್ಕಾಗಿ? ಯಾವ ಆಸೆಗಾಗಿ? ತೃಪ್ತಿಯಿಂದ ಇದ್ದವರ ಜೀವನವೇ ಎಲ್ಲರಿಗೂ ಆದರ್ಶ. ಅನುದಿನ ಪರಮಾತ್ಮನನ್ನು ಸ್ಮರಿಸುವುದೇ ವೇದಶಾಸ್ತ್ರ ಓದುವ ಮುಖ್ಯ ಉದ್ದೇಶ. ಆದರೆ ಎಲ್ಲರೂ ಹಾಗೆಯೇ ಮಾಡುತ್ತಾರೆಯೇ? ಪುಸ್ತಕ ಮುಚ್ಚಿದರೆ ಸರಿ ಮತ್ತೆ ಮನಸ್ಸು ಅಲ್ಲಿಲ್ಲ. ಅದು ಅಷ್ಟರವರೆಗೆ ತಡೆದಿಟ್ಟ ಕಾಮನೆಗಳ ಅತ್ತಕಡೆ ಓಡುತ್ತದೆ. ವೇದಶಾಸ್ತ್ರ ಓದುವುದಕ್ಕಿಂತ ಅದನ್ನು ಓದಿದಲ್ಲಿ ಪರಮಾತ್ಮನ ನೆನಪು ಅಡಿಗಡಿಗೆ ಆಗುತ್ತದೆಯೇ ಎಂಬ ಮಾತು. ಹಗಲು ಹೊತ್ತಿನಲ್ಲಿ ಮಂದವಾಗಿ ಎಣ್ಣೆತುಂಬಿ ತುಳುಕಿ ಉರಿಯುತ್ತಿದ್ದ ಈ ದೀಪಗಳು ನೀನು ಅನುದಿನ, ಅಡಿ

ಗಡಿಗೆ ದೇವರನ್ನು ಸ್ಮರಿಸುವ ಸಾಕ್ಷಿಗಳಿವು. ಧ್ರುವನ ಭಕ್ತಿ ಕಂಡು ಆಶ್ಚರ್ಯ ಪಟ್ಟ ನಾನು ಇಲ್ಲಿ ಬಂದನಂತರ ಅದರ ಕಾರಣವನ್ನು ತಿಳಿದೆ.

ಸುನೀತಿ – ಏನನ್ನು ತಿಳಿದಿರಿ ಮುನಿಗಳೇ!

ನಾರದ– ಮನೆಯ ಗೃಹಿಣಿ, ಮಕ್ಕಳ ತಾಯಿ, ತನ್ನ ನಡತೆಯನ್ನು ಶುದ್ಧವಾಗಿಟ್ಟುಕೊಂಡರೆ ಏನುಮಾಡಲು ಸಾಧ್ಯವೆಂಬುದನ್ನು ಇಂದು ಅರಿತು ಕೊಂಡೆ. ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು, ಮಹೇಶ್ವರರ ಪತ್ನಿಗಳಲ್ಲಿ ಕಾಣದ ಅದೊಂದು ಅಪೂರ್ವ ಶಾಂತಿಯನ್ನು ನಿನ್ನಲ್ಲಿ ಕಂಡೆ. ಅರಸನ ಪಟ್ಟದರಸಿಯಾಗಿ ಅವನಿಂದ ತ್ಯಜಿಸಲ್ಪಟ್ಟವಳಾದ ನೀನು, ಸಿಗದ ಸುಖಕ್ಕೆ ಆಸೆಪಡದೆ, ಪರಮಾತ್ಮನಕಡೆ ಮನಸ್ಸನ್ನು ತಿರುಗಿಸಿದೆ. ಅದರಿಂದ ಮೂರುಲೋಕಕ್ಕೂ ಅಪೂರ್ವನೆಂದು ಹೇಳಿಸಿಕೊಳ್ಳುವ ಪುತ್ರನನ್ನು ಜಗತ್ತಿಗೆ ಕಾಣಿಕೆ ಇತ್ತೆ.

ಸುನೀತಿ– ಎಲ್ಲವೂ ಪರಮಾತ್ಮನ ದಯೆ!

ನಾರದ– ಅದನ್ನೇ ಬೇಡಿದೆ. ಅವನು ನೀಡಿದನು. ಬೇಡಿದು ದನ್ನು ಕೊಡುವವನು ಅವನು. ಬೇಡುವವರಾದ ನಾವು ಜಾಗ್ರತೆಯಿಂದ ಬೇಡಬೇಕು. ಇದ್ದ ಪುಣ್ಯ ಖರ್ಚುಮಾಡಿ, ಅಶಾಶ್ವತ ಸುಖವನ್ನು ಬೇಡು ವುದಕ್ಕಿಂತ, ಇಹಲೋಕದ ಸುಖಕ್ಕೆ ಬೆನ್ನುತೋರಿಸಿ ಪರಮಾತ್ಮನಕಡೆ ಮುಖಮಾಡಿದಲ್ಲಿ ಆ ಸುಖ ತಾನಾಗಿ ನಮ್ಮ ಬೆನ್ನುಹಿಡಿಯುವುದು.

("ಉತ್ತಾನಪಾದ ಮಹಾರಾಜರಿಗೆ ಜಯವಾಗಲಿ" ಎಂಬ ಜಯಜಯ ಕಾರದೊಡನೆ ಉತ್ತಾನಪಾದ ರಾಜನು ಸುರುಚಿ ಮತ್ತು ಉತ್ತಮರೊಂದಿಗೆ ಬಂದು ನಾರದರಿಗೆ ಸಾಷ್ಟಾಂಗ ನಮಸ್ಕರಿಸುತ್ತಾನೆ.)

ನಾರದ– ಕೀರ್ತಿಶಾಲಿಯಾಗಿ ಬಾಳು. ಸೌಭಾಗ್ಯವತೀ ಭವ. ಆಯುಷ್ಮಂತನಾಗಿ ಬಾಳು. (ಹರಸುವನು)

(ಉತ್ತಾನಪಾದ ರಾಜನು ತಲೆ ತಗ್ಗಿಸಿ ನಿಲ್ಲುವನು.)

ನಾರದ— ಉತ್ತಾನಪಾದ, ಈಗ ನಾನು ನಿನ್ನಲ್ಲಿಗೆ ಬರುವವನಿದ್ದೆ. ನೀನಾಗಿ ಬಂದೆ. ನತಮಸ್ತಕನಾದ ನೀನು ನಿನ್ನ ತಪ್ಪನ್ನು ಒಪ್ಪಿಕೊಂಡಂತಿದೆ.

ನಿನ್ನ ಮುಖವು ಪಶ್ಚಾತ್ತಾಪದಿಂದ ಸುಡುತ್ತಿದೆ. ಇದುವೇ ನೀನು ಮಾಡಿದ ಕೆಲಸಕ್ಕೆ ಪ್ರಾಯಶ್ಚಿತ್ತ.

ಸುರುಚಿ— ಮುನಿವರ್ಯರೆ, ನಾನು ಮಾಡಿದ ಪಾಪಕ್ಕೆ ಯಾವ ಪರಿಹಾರ ಸೂಚಿಸುತ್ತೀರಿ. ವಿಷಪಾನ ಮಾಡಲೇ? ನೀರಿನಲ್ಲಿ ಮುಳುಗಲೇ? ಬೆಂಕಿಯಲ್ಲಿ ಹಾರಲೇ?

ನಾರದ— ನೀವಿಬ್ಬರೂ ನಿಮ್ಮ ಧರ್ಮವನ್ನು ಮರೆತು ತಪ್ಪುಹಾದಿ ಹಿಡಿದಿದ್ದೀರಿ. ನೀನು ತಾಯಿಯೂ ಹೌದು ಅರಸ ತಂದೆಯೂ ನಿಜ. ಅದನ್ನು ನೀವು ಮರೆತಿರಿ. ಆದರೆ ಊರನ್ನು ಆಳುವ ನೀವು ಪ್ರಜೆಗಳಿಗೆ ಉತ್ತಮ ಹಾದಿಯನ್ನು ತೋರಿಸಬೇಕಾಗಿದೆ. ನೀವು ಆಚರಿಸಿದಲ್ಲಿ ಪ್ರಜೆಗಳು ನಿಮ್ಮನ್ನು ಅನುಕರಣಮಾಡುವರು. 'ಯಥಾ ರಾಜಾ ತಥಾ ಪ್ರಜಾ" ಎಂಬಂತೆ. ಆದುದರಿಂದ ಸಮಾಜದಲ್ಲಿ ಗೌರವ ಸಿಗುವ ವ್ಯಕ್ತಿಗಳು ತಮ್ಮ ನಡತೆಯನ್ನು ಪರಿಶುದ್ಧವಾಗಿಟ್ಟುಕೊಳ್ಳಬೇಕು. ಸರಿ! ನೀವಿಂದು ಇಲ್ಲಿ ಬರಲು ಕಾರಣವೇನು? ನನ್ನ ಆಗಮನವೇ ಯಾ......

ಉತ್ತಾನ— (ಕೈಜೋಡಿಸಿ) ಮುನಿಗಳೇ, ತಾವು ತ್ರಿಕಾಲಜ್ಞಾನಿಗಳಾಗಿದ್ದೀರಿ. ಆದರೂ ನಾನು ಮಾಡಿದ ತಪ್ಪನ್ನು ಒಪ್ಪಲು ಬೇಸರವಿಲ್ಲ. ಅಂದು ಧ್ರುವಕುಮಾರ ನನ್ನ ಮನೆಯಿಂದ ಹೋದಂದಿನಿಂದ ನನ್ನ ಮನೆಯು-ನನ್ನ ಮನಸ್ಸಿನ ಭಾಗ್ಯದೇವತೆ ಹೊರಟುಹೋದಂತಿದೆ. ಧ್ರುವಕುಮಾರ ವನವಾಸಕ್ಕೆ ತೆರಳಿದ ಸುದ್ದಿಯನ್ನು ನಾನು ಕೇಳಿದ್ದೇನೆ. ಆದರೆ ನಾನು ಜೀವನ್ಮೃತಾವಸ್ಥೆಯಲ್ಲಿ ಇದ್ದೇನೆ. ನಾನು ಜೀವಂತ ಶವವಾಗಿದ್ದೇನೆ. ಅಂದಿನಿಂದ ನಾನು ಬಂದು ಸುನೀತಿಯನ್ನು ಕಂಡು ಅವಳೊಡನೆ ಕ್ಷಮೆ ಬೇಡಿ ....

ಸುನೀತಿ— (ಕೈಗಳಿಂದ ಕಿವಿಗಳನ್ನು ಮುಚ್ಚಿ) ಶಾಂತಂ ಪಾಪಂ! ಇದೆಂತಹ ಅಪವಿತ್ರ ಮಾತು.

ನಾರದ— ಉತ್ತಾನಪಾದ– ಸುನೀತಿ, ನೀವು ಇನ್ನುಮುಂದೆ ಈ ವಿಷಯವನ್ನು ಮರೆಯಬೇಕು. ಮುಂದಿನ ಕಾರ್ಯದಕಡೆ ಗಮನಕೊಡಿರಿ.

ಸುರುಚಿ— (ಸುನೀತಿಯುನ್ನು ನಮುಸ್ಕರಿಸಿ) ಅಕ್ಕಾ! ನನ್ನ ತಪ್ಪನ್ನು ಕ್ಷಮಿಸಿ ನನ್ನನ್ನು ಆಶೀರ್ವದಿಸು.

ಸುನೀತಿ— ಇದೆಂತಹ ಹುಚ್ಚು! ಎಲ್ಲವೂ ದೈವೇಚ್ಛೆ! ನಾವು ಕಾರಣಮಾತ್ರರು. ಎಲ್ಲವೂ ಆಗುವುದು ಒಳಿತಿಗಾಗಿ. ಪಶ್ಚಾತ್ತಾಪಪಡದಿರು.

ನಾರದ— ಸರಿ ಸುನೀತಿ! ನಾನು ಈಗ ಹೇಳಿದ್ದೆ. ಸಿಗದ ಸುಖಕ್ಕೆ ಆಸೆಮಾಡದೆ ಅದಕ್ಕೆ ಬೆನ್ನುಮಾಡಿ ಪರಮಾತ್ಮನ ಕಡೆ ಮುಖಮಾಡಿದಲ್ಲಿ ಸಿಗದೆ ಓಡಿಹೋದ ಸುಖ ಬೆನ್ನುಹತ್ತುತ್ತದೆಂದು. ಆ ಮಾತು ಈಗಲೇ ಫಲಿಸಿತು. (ಉತ್ತಾನಪಾದನಿಗೆ) ಮಹಾರಾಜಾ ನೀನು ಬಂದ ಉದ್ದೇಶವನ್ನು ನಿನ್ನ ಬಾಯಿಯಿಂದ ಅವಳಿಗೆ ಹೇಳು.

ಉತ್ತಾನ— ಸುನೀತಿ ನಾವು ನಿನ್ನನ್ನು ಕರಕೊಂಡುಹೋಗಬೇಕೆಂದು ಬಂದಿದ್ದೇವೆ. ಹೊರಡು.

ಸುನೀತಿ— (ಅರಸನನ್ನು ನಮುಸ್ಕರಿಸಿ) ಅಪ್ಪಣೆ. ಆದರೆ ಆದರೆ.... (ಕಣ್ಣೀರಿಡುವಳು)

ನಾರದ— ಸರಿ! ಧ್ರುವಕುಮಾರನನ್ನು ಕರಕೊಂಡೇ ಹೋಗುವೆ. ಅದೋ ನೋಡಿ, ಆಕಾಶದಲ್ಲಿ ಪುಷ್ಪವೃಷ್ಟಿಯಾಗುತ್ತದೆ. ಭೂಮಂಡಲದಲ್ಲಿ ಎಲ್ಲಿಯೋ ನಾರಾಯಣನ ಆಗಮನ ಸೂಚಿಸುತ್ತಿದೆ. (ಪುಷ್ಪವೃಷ್ಟಿ) ದೇವತೆಗಳು ನಿನ್ನಮೇಲೆ ಸುರಿಸಿದ ಪೂಮಳೆ ಅದು! ನಡೆಯಿರಿ. ಧ್ರುವಕುಮಾರನನ್ನು ಕರಕೊಂಡೇ ಪುರಪ್ರವೇಶಮಾಡೋಣ. ಉತ್ತಾನಪಾದ ರಾಜ! ವೈಭವದಿಂದ ಧ್ರುವಕುಮಾರನನ್ನು ಇದಿರುಗೊಳ್ಳಬೇಕಾಗಿದೆ. ಎಲ್ಲರೂ ಹೊರಡಿರಿ.

(ತೆರೆ ಬೀಳುವುದು)

ಏಳನೆಯ ದೃಶ್ಯ

(ಸ್ಥಳ: - ರಾಜಮಾರ್ಗ-ಪ್ರಜೆಗಳು ಚಿಂತಾಕ್ರಾಂತರಾಗಿ ಪ್ರವೇಶಿಸುತ್ತಾರೆ)

ಮೊದಲನೆಯವ— ಅಯ್ಯೋ! ಧ್ರುವಕುಮಾರರು ಹೋದಂದಿನಿಂದ ಈ ಪಟ್ಟಣವು ಸ್ಮಶಾನದಂತೆ ಭಾಸವಾಗುತ್ತದೆ. ಆಹಾ! ಎಂತಹ ಕಲ್ಲುಹೃದಯದವರಯ್ಯಾ ಆ ಅರಸುದಂಪತಿಗಳು?

ಎರಡನೆಯವ— ಶ್ಶ್ಯಾ ಶ್ಶ್ಯಾ! ಏನಯ್ಯಾ ನಡುಮಾರ್ಗದಲ್ಲಿ ಎಂತಹ ಅಸಂಬದ್ಧ ಮಾತು? ರಾಜಸೇವಕರ್‍ಯಾರಾದರೂ ಕೇಳಿದರೆ ಮಾವನ ಮನೆಗೆ ಕಳಿಸಿಯಾರು.

ಮೊದಲನೆಯವ— ಆದಾದರೆ ಅದು! ಜೀವಂತ ಸ್ಮಶಾನದಲ್ಲಿರುವುದಕ್ಕಿಂತ ಸೆರೆಮನೆ ಎಷ್ಟೋ ಮೇಲು.

ಮೂರನೆಯವ— ಇತ್ತಕಡೆ ಯಾರೋ ರಾಜಕರ್ಮಚಾರಿಗಳು ಬರುವಂತಿದೆ. ಸ್ವಲ್ಪ ಅಡ್ಡನಿಂತು ಕೇಳೋಣ.

(ಇಬ್ಬರು ರಾಜಕರ್ಮಚಾರಿಗಳ ಪ್ರವೇಶ)

ಮೊದಲನೆಯ ಅಧಿಕಾರಿ— ಮಹಾರಾಜರು ರಾಜಸ್ಥಾನಕ್ಕೆ ಬಾರದೆ ಎರಡು ವಾರಗಳು ಸಂದುವು. ನಗರವೆಲ್ಲ ಸ್ಮಶಾನ ಸಮವಾಗಿದೆ. ಹೀಗೆಯೇ ನಡೆದರೆ ರಾಜ್ಯಕ್ಕೆ ಹಾನಿಯಿದೆ.

ಎರಡನೆಯವ— ಆದರೆ ಮಹಾರಾಜರಿಗೆ ಹೇಳುವವರು ಯಾರು?

ಮೊದಲನೆ ಅಧಿಕಾರಿ— ಮಂತ್ರಿಗಳು!

ಎರಡನೆಯವ— ಅವರ ಕುಶಲತೆಯಿಂದ ಇಷ್ಟು ದಿನ ಶಾಂತವಾಗಿ ಸಂದುವು. ಆದರೆ ಎಷ್ಟುದಿನ ತಾನೇ ಹೀಗೆ ನಡೆದೀತು? ಕೆಲವು ಸೇವಕವರ್ಗ ಇತ್ತ ಬರುವಂತಿದೆ. ಏನು ವಿಶೇಷವೆಂದು ಅಡ್ಡನಿಂತು ಕೇಳೋಣ.

(ಅಡ್ಡ ನಿಲ್ಲುವರು)

ಮೊದಲನೆಯುವ— ನಾಳೆ ನಾನು ಕೆಲಸಕ್ಕೆ ರಾಜಿನಾಮೆ ಕೊಡಬೇಕೆಂದಿರುತ್ತೇನೆ. ಸಾಕಾಯಿತಪ್ಪಾ ಈ ಸ್ಮಶಾನ ಶಾಂತಿ! ಇನ್ನು ನಾಲ್ಕಾರು ದಿನ ಹೀಗೆ ನಡೆದರೆ ಏನಾದರೂ ಅಪಾಯ ಸಂಭವಿಸುವುದು ನಿಶ್ಚಯ.

ಎರಡನೆಯು ಸೇವಕ— ಏನ್ನಾಯ್ತು! ವಿಶೇಷವೇನು?

ಮೊದಲನೆಯುವ— ನಿತ್ಯದ್ದೆ. ಆದರೆ ಯಾರಲ್ಲಿಯೂ ಹರ್ಷವಿಲ್ಲ. ಉತ್ಸಾಹವಿಲ್ಲ. ಕೆಲಸದಲ್ಲಿ ಅಸಡ್ಡೆತನ ಕಾಣಬರುತ್ತಿದೆ. ಅರಸರು ಎರಡು ವಾರಗಳಿಂದ ಅರಮನೆಯಿಂದ ಹೊರ ಹೊರಡಿಲ್ಲ. ವೈರಿಗಳು, ಬಂಡಾಯಗಾರರು, ದರೋಡೆಖೋರರು ಹೊಂಚುಹಾಕುತ್ತಲಿರುವರು.

ಎರಡನೆಯುವ— ಸರಿ! ಉಪ್ಪು ತಿಂದ ಮನೆಗೆರಡನ್ನು ಎಣಿಸುತ್ತೀಯಾ? ಥೂ ನಿನ್ನ ಬಾಳುವೆಯೆ! ಕಷ್ಟಕಾಲದಲ್ಲಿ ಉಪ್ಪನ್ನ ಉಂಡವರ ಕೈಬಿಡುವಿಯೋ? ಕ್ರಾಂತಿಯಾದರೆ ಕ್ರಾಂತಿ. ಧನಿಗಾಗಿ ಜೀವಕೊಟ್ಟರೆ ವೀರಸ್ವರ್ಗ ಸಿಗುವುದು.

ಮೊದಲನೆಯುವ— ಧನಿ! ಉಪ್ಪು! ಹಾಲಹಸುಳೆಯುನ್ನು ವನಕ್ಕಟ್ಟಿದ ಮಹಾರಾಜರು ನಾಳೆ ಯಾರ ಮಾತನ್ನಾದರೂ ಕೇಳಿ ನಮ್ಮನ್ನೆಲ್ಲ ಗಲ್ಲಿಗೇರಿಸಿಡಲೂ ಸಾಕು. ಇಂತಹ ಅನಾಚಾರ ನಡೆಯುವ ಸ್ಥಳ ಬಿಟ್ಟು ದೂರ ಹೋದಷ್ಟು ಒಳ್ಳೇದು.

ಎರಡನೆಯುವ— ಕೆಲಸಬಿಟ್ಟು ದಾಮಣ್ಣ ಮಾಡಿದಂತೆ ಸುನೀತಿ ದೇವಿಯುವರ ಬಾಗಿಲಲ್ಲೇ ಬಿದ್ದುಕೊಳ್ಳೋಣ

ಮೊದಲನೆಯುವ— ಅವರ ದುಃಖ ಅವರಿಗೆ. ದಾಮಣ್ಣ ಮಾಡಿದ್ದು ಸರಿ. ನಾವೆಲ್ಲ ಅಲ್ಲಿಗೆ ಹೋಗಿ ಸೇರಿದಲ್ಲಿ ಇಲ್ಲದ ಕಷ್ಟ ಅವರ ಮೇಲೆ ಒಡ್ಡಿದಂತೆಯೇ ಸರಿ.

ಎರಡನೆಯುವನು— ಅಗೋ ದೂರದಲ್ಲಿ ಯಾರೋ ಬರುವಂತಿದೆ. (ನಿರೀಕ್ಷಿಸಿ)ದಾಮಣ್ಣ! ಸರಿ,ಮದುಮಗನಂತೆ ಶೃಂಗರಿಸಿಕೊಂಡೇ ಬರುತ್ತಾನೆ. ಸ್ವಲ್ಪ ಮರೆಯಾಗೋಣ.

ದಾಮಣ್ಣ— (ದಾಮಣ್ಣ ಪ್ರವೇಶಿಸಿ) ಅಲ್ಲ, ಜನ ಎಲ್ಲಾ ಹೀಗೆ ಮರೆಯಾಗಿ ನಿಲ್ಲೋದು ಏತಕ್ಕೆ? ಇಣಿಕಿ ನೋಡೋದು ಏತಕ್ಕೆ? ನಾನು ಕಳ್ಳನೇ? ಅಡ್ಡನಿಂತು ನೋಡುವವರು ಕಳ್ಳರೇ? ಧೈರ್ಯವಿದ್ದರೆ ಇದಿರು ಬನ್ನಿ ನೋಡುವಾ!

(ಎಲ್ಲರೂ ಮುಂದೆಬರುವರು.)

ದಾಮಣ್ಣ— ಸರಿ ಸಾಲಾಗಿ ನಿಲ್ಲಿ. ನಿಮಗೊಂದು ಸಂತೋಷದ ಸುದ್ದಿ ಹೇಳಲಿದೆ. ಧ್ರುವಕುಮಾರನನ್ನು ಕರತರಲು ಮಹಾರಾಜರು ರಾಜವೈಭವ ದಿಂದ ಹೊರಡಲಿದ್ದಾರೆ. ಪೆಚ್ಚುಮಾಡಿ ಅಲ್ಲಲ್ಲಿ ಎಡವುತ್ತ, ತಡವುತ್ತ ಇರುವು ದನ್ನು ಬಿಟ್ಟು ಬೇಗ ಬೇಗ ಇದಿರ್ಗೊಳ್ಳಲು ಹೊರಡಿ. ನಾರದ ಮಹರ್ಷಿ ಗಳು ಈಗಾಗಲೇ ಬಂದು ಧ್ರುವಮಹಾರಾಜರ ತಪಸ್ಸು ಪೂರ್ಣತೆ ಹೊಂದ ಲಿದೆ ಎಂದಿದ್ದಾರೆ. ಹೊರಡಿ, ಹೊರಡಿ.

(ಎಲ್ಲರೂ ಸಂತೋಷದಿಂದ ಹೊರಡುವರು. ತೆರೆ ಬೀಳುವುದು.)

ಎಂಟನೆಯ ದೃಶ್ಯ

ಸ್ಥಳ:— ಘೋರ ಅರಣ್ಯ. ಪದ್ಮಾಸನ ಹಾಕಿ ಧ್ರುವ ಧ್ಯಾನಾಸಕ್ತನಾಗಿ ದ್ದಾನೆ. ಶಂಖ, ಚಕ್ರ, ಗದಾ, ಪದ್ಮಧಾರಿಯಾಗಿ ಶ್ರೀಮನ್ನಾರಾಯಣನು ಪ್ರತ್ಯಕ್ಷನಾಗುವನು. (ಟ್ರೇನ್ಸ್‌ಫರ್ ಸೀನ್)

ನಾರಾಯಣ— ವತ್ಸಾ ಧ್ರುವ! ಎದ್ದೇಳು. ನಿನ್ನ ತಪಶ್ಚರ್ಯವನ್ನು ಮೆಚ್ಚಿದ ನಾನು ನಿನ್ನನ್ನು ಕಾಣಲು ಬಂದಿರುವೆನು ಕಂದಾ! ಎದ್ದೇಳು. ಬೇಕಾದ ವರವನ್ನು ಬೇಡಿಕೊ.

ಧ್ರುವ— (ಇದ್ದಂತೆ ಇರುತ್ತಾನೆ.)

ನಾರಾಯಣ— (ಧ್ರುವನನ್ನು ಆಲುಗಾಡಿಸಿ) ಕಂದಾ ಎದ್ದೇಳು. ನಿನ್ನ ಹೃದಯದಲ್ಲಿ ಕಂಡ ರೂಪವನ್ನು ಕಣ್ಣಿನಿಂದ ನೋಡು.

(ಧ್ರುವ ಮೆಲ್ಲಮೆಲ್ಲನೆ ಕಣ್ಣುಬಿಟ್ಟು ಪರಮಾತ್ಮನನ್ನೇ ದಿಟ್ಟಿಸಿ ನೋಡು ತ್ತಾನೆ. ಪುನಃ ಕಣ್ಣುಮುಚ್ಚಿ ಕಣ್ಣುಗಳನ್ನು ತಿಕ್ಕಿ ಪುನಃ ಪುನಃ ಇಣಿಕಿ ನೋಡುತ್ತಾನೆ.)

ನಾರಾಯಣ— ನಾನೇ, ಮಗು. ನಿನ್ನ ಹೃದಯದಲ್ಲಿರುವ ನಾನೇ. ಸಂಶಯಬೇಡ. ಬೇಕಾದ ವರವನ್ನು ಬೇಡಿಕೋ.

(ಧ್ರುವ ಗಡಿಬಿಡಿಯಿಂದ ಎದ್ದು ದೇವರನ್ನು ಸಾಷ್ಟಾಂಗವಾಗಿ ನಮಸ್ಕರಿಸುತ್ತಾನೆ. ನಾರಾಯಣನು ಧ್ರುವನನ್ನು ಆಲಿಂಗಿಸುತ್ತಾನೆ.)

ನಾರಾಯಣ— ಮಗು ನಿನ್ನ ತಪಸ್ಸು ಪೂರ್ಣತೆ ಪಡೆದಿದೆ. ಯಾವುದು ಬೇಕು ಅದನ್ನು ಬೇಡು.

ಧ್ರುವ— ಪರಮಾತ್ಮಾ! ಯಾವುದನ್ನು ಬೇಡಲಿ. ನಿನಗಿಂತ ಮೇಲಿನದು ಏನಾದರೂ ಇದೆಯೇ! (ಆಲೋಚಿಸಿ) ಇರಲಿಕ್ಕಿಲ್ಲ. ಇದ್ದರೂ ಅದು ನನಗೆ ಬೇಡ. ಪ್ರಭೋ ನನಗೆ ನೀನೇ ಬೇಕಾಗಿರುವೆ. ಸಿಕ್ಕಿದೆಯಲ್ಲಾ ನೀನು; ಅಷ್ಟೇ ಸಾಕು.

ನಾರಾಯಣ— ನೀನು ಅರಣ್ಯಕ್ಕೆ ಬಂದುದು ನನ್ನನ್ನು ಕಾಣುವ ಸಲುವಾಗಿಯೆ ಅಥವಾ ಇನ್ನೇನಾದರೂ ಬೇಡಲಿಕ್ಕಿದೆಯೇ?

ಧ್ರುವ— ದೇವಾ ನಿನ್ನನ್ನು ಕಂಡೊಡನೆ ನಾನು ಎಲ್ಲವನ್ನೂ ಮರೆತಿದ್ದೇನೇ. ಇನ್ನೇತಕ್ಕೆ ಅದರ ನೆನಪು. ನೀನೋರ್ವನಿದ್ದರೆ ನನಗೆ ಯಥೇಷ್ಟವಾಯ್ತು. ಇನ್ನೇನೂ ಬೇಡ ನನಗೆ.

ನಾರಾಯಣ— ಮಗುವೆಂದರೆ ಮಗು. ಅಪ್ಪಯ್ಯನ ತೊಡೆಮೇಲೆ ಕುಳಿತುಕೊಳ್ಳುವ ವರಬೇಡಲು ಬಂದ ನೀನು ಎಲ್ಲವನ್ನೂ ಮರೆತಂತಿದೆ. ಚಿಂತಿಲ್ಲ. ನಿನ್ನ ಆ ಆಸೆ ಈಗಲೇ ಪೂರೈಸುವುದು ಧ್ರುವಕುಮಾರ. ಇಹದಲ್ಲಿ ನೀನು ಕೀರ್ತಿಶಾಲಿಯಾಗಿ, ರಾಜ್ಯವನ್ನಾಳಿ ಪರದಲ್ಲಿ ನಿನಗಾಗಿ ಅಚಲ ಪದವನ್ನು ಕಾದಿಟ್ಟಿದ್ದೇನೆ. ಅದು ನಿನಗಾಗಿ ಮೀಸಲಾಗಿಟ್ಟಿದೆ. ನಿನಗಾಗಿಯೇ ಅದನ್ನು ನಿರ್ಮಿಸಿದಂತಿದೆ. ಅದನ್ನು ನೀನು ಪಡೆಯುವವನಾಗು.

ಧ್ರುವ— ಪರಮಾತ್ಮಾ ಅದನ್ನು ನನಗಿತ್ತು ನೀನು ಪುನಃ ಅಂತರ್ಧಾನನಾಗಲಿಕ್ಕಿಲ್ಲವಷ್ಟೆ!

ನಾರಾಯಣ— ಇಲ್ಲ ಮಗು. ನಿನ್ನ ಬಾಹ್ಯ ಕಣ್ಣುಗಳಿಗೆ, ನನ್ನ ಈ ರೂಪ ಸದಾಕಾಲ ಗೋಚರವಾಗದಿದ್ದರೂ ನಿನ್ನ ಹೃದಯದಲ್ಲಿ ನಾನು ಸದಾಕಾಲ ವಾಸಮಾಡುವೆನೆಂಬುದನ್ನು ಮರೆಯಬೇಡ. ಇದು ನಾನಾಗಿ ನಿನಗೆ ಕೊಡುವ ವರದಾನ. (ಧ್ರುವನ ಹೃದಯವನ್ನು ಕೈಯಿಂದ ಸ್ಪರ್ಶಿಸು ವನು.)

(ಧ್ರುವನು ಕಣ್ಣುಮುಚ್ಚಿ ತೆರೆಯುತ್ತಾ, ಸಂತೋಷದಿಂದ ಕುಣಿದಾಡು ವನು. ಸರಿ ನಿನ್ನ ಇದೇ ರೂಪ ಇಲ್ಲಿದೆ ಎಂದು ಹೃದಯವನ್ನು ತೋರಿಸುವನು. ದೇವರ ಸ್ಮರಣೆಮಾಡುತ್ತಾ ನಾರದ, ಉತ್ತಾನಪಾದ, ಸುರುಚಿ, ಸುನೀತಿ, ಇತ್ಯಾದಿ ಯವರ ಪ್ರವೇಶ. ನಾರದನಿಂದ ಮೊದಲ್ಗೊಂಡು ಎಲ್ಲರೂ ಪರಮಾತ್ಮನನ್ನು ನಮಸ್ಕರಿಸುವರು.)

ನಾರದ— ಧ್ರುವಕುಮಾರ ಇತ್ತ ಬಾ ಮಗು. (ಧ್ರುವ ಹೋಗಿ ತಂದೆ ತಾಯಿಯವರನ್ನು ನಮಸ್ಕರಿಸುವನು. ಪ್ರತಿಯೊಬ್ಬರೂ ಅವನನ್ನು ಬಿಗಿದಪ್ಪಿ ಮುದ್ದಾಡಿ ಹರಸುವರು. ಸುರುಚಿ ಅಳುತ್ತಿರುವಳು.)

ಧ್ರುವ— ಚಿಕ್ಕಮ್ಮಾ! ಇನ್ನೂ ಕೋಪವೇ ಚಿಕ್ಕಮ್ಮಾ! ನಾನು ಅಂದು ನೀನು ಹೇಳಿದಂತೆ ಮಾಡಿಲ್ಲವೇ ಚಿಕ್ಕಮ್ಮಾ!

ಸುರುಚಿ— ಧ್ರುವಕುಮಾರ! ನಾನು ಯಾವ ಬಾಯಿಯಿಂದ ಮಾತನಾಡಲಿ! ನಾನು ರಾಕ್ಷಸಿಯಾಗಿ ನಿನಗೆ ವಿಷವನ್ನು ಅರೆದುಕೊಟ್ಟೆ.

ಧ್ರುವ— ವಿಷವಲ್ಲವಮ್ಮಾ ಅಮೃತ. ಹಿರಿಯರು ಮಕ್ಕಳಿಗೆ ಕೊಡು ವುದು ಅಮೃತವಮ್ಮಾ. ಅದು ಮಕ್ಕಳ ಅಪಕ್ವ ಬುದ್ಧಿಗೆ ಮೊದಲು ಮೊದಲು ವಿಷದಂತೆ ಭಾಸವಾಗುತ್ತದೆ. ಅಷ್ಟೆ! ಚಿಕ್ಕಮ್ಮಾ ನಿನ್ನಿಂದಾಗಿ ನಾನು ಪರಮಾತ್ಮನನ್ನು ಕಾಣಲು ಸಮರ್ಥನಾದೆ. ಕೋಪ ತ್ಯಜಿಸಿ ನನ್ನನ್ನು ಹರಸು.

ಸುರುಚಿ— ಮಗು ಆಯುಷ್ಮಂತನಾಗಿ ಬಾಳು. (ಸುನೀತಿಯ ಪಾದಗಳಿಗೆ ನಮಿಸಿ) ಅಕ್ಕಾ ನನ್ನನ್ನು ಕ್ಷಮಿಸುವಿಯಾ?

ಸುನೀತಿ— ತಂಗಿ ಇದೆಂತಹ ಮಾತು! ಎಲ್ಲವೂ ಸಂತೋಷದಲ್ಲಿ ಮುಕ್ತಾಯುಗೊಂಡಿದೆ. ಇನ್ನೇತಕ್ಕೇ ದುಃಖ ಸಂತಾಪ. ಎಲ್ಲವನ್ನೂ ಒಂದು ಭಯಂಕರ ಸ್ವಪ್ನವೆಂದು ಭಾವಿಸೋಣ.

ನಾರದ— ಉತ್ತಾನಪಾದ ನೀವೆಲ್ಲರೂ ಭಾಗ್ಯಶಾಲಿಗಳು. ಅನಾಯಾಸವಾಗಿ ಧ್ರುವಕುಮಾರನ ಸಂಸರ್ಗದಿಂದ ಪರಮಾತ್ಮನನ್ನು ಕಾಣುವಂತಹ ಪುಣ್ಯ ಸಂಪಾದಿಸಿಕೊಂಡಿರಿ. (ಧ್ರುವನಕಡೆ ತಿರುಗಿ) ಬಾ ಮಗು. ಅಪ್ಪಯ್ಯ ನಿನ್ನನ್ನು ಎತ್ತಿಕೊಳ್ಳುವನು. (ಧ್ರುವನನ್ನು ಉತ್ತಾನಪಾದರಾಜನ ಬಳಿ ತಂದು ನಿಲ್ಲಿಸುವನು. ಉತ್ತಾನಪಾದ ರಾಜನು ಧ್ರುವನನ್ನು ಎತ್ತಿ ಕೊಳ್ಳುವನು) ಸರಿ ತೀರಿತಲ್ಲ ನಿನ್ನ ಆಸೆ.

ಧ್ರುವ— ಇದೆಲ್ಲ ನಿಮ್ಮ ಆಶೀರ್ವಾದದ ಫಲ ಮುನಿಗಳೇ.

ನಾರದ— ಸರಿ! ಸರಿ! ನನ್ನ ಆಶೀರ್ವಾದ, ನಿನ್ನ ತಪಸ್ಸು. ಉತ್ತಾನಪಾದ ನೀನಿನ್ನು ಈ ಮಗುವನ್ನು ಸಂಭ್ರಮದಿಂದ ಅರಮನೆಗೆ ಕೊಂಡೊಯ್ದು ಸನ್ಮಾನಿಸಬೇಕು.

ಉತ್ತಾನ— ಇದು ನನ್ನ ಕಣ್ಣುಗೊಂಬೆ ಮುನಿಗಳೇ. ನಾನು ಒಂದು ನಿಮಿಷ ಅಗಲಿರಲಾರೆ. ನೀವು ನಮ್ಮೊಡನೆ ಬಂದು ಧ್ರುವಕುಮಾರನಿಗೆ ನಿಮ್ಮ ಹಸ್ತಗಳಿಂದ ಯುವರಾಜಾಭಿಷೇಕಮಾಡಬೇಕು ಮುನಿಗಳೇ.

ನಾರದ— ತಥಾಸ್ತು.

ಮಂಗಲ

ಇದೇ ಲೇಖಕಿಯರ ಇತರ ಕೃತಿಗಳು:

ಹಾರಿಹೋದ ಹಕ್ಕಿ (ಕಥಾಸಂಗ್ರಹ)

ಬೆಲೆ: ರೂ. 1—0—0

ಸವತಿಯ ಸೋಲು (ಮಕ್ಕಳ ನಾಟಕ)

ಬೆಲೆ: ರೂ. 0—6—0

★

ಅಚ್ಚಿನಲ್ಲಿ:

ನಮ್ಮೂರ ಶಿವಪಾರ್ವತಿ ಕಥಾಸಂಗ್ರಹ)

ನಚಿಕೇತ (ಮಕ್ಕಳ ನಾಟಕ)

ಇತ್ಯಾದಿ ಇತ್ಯಾದಿ......